ನೀಡಿ. ಇಲ್ಲದಿದ್ದರೆ ನನ್ನ ಅನುಭವದಲ್ಲಿ ಇಂಥಾದ್ದು ಬೇಗ ಆಗುವುದಿಲ್ಲ.

ಅಧ್ಯಕ್ಷರು:- ನಾನು ಸಮಿತಿಗೆ ಎರಡು ತಿಂಗಳ ಕಾಲಾವಕಾಶ ಕೊಡುತ್ತಿದ್ದೇನೆ. ಹಕ್ಕುಚ್ಯುತಿ ಸಮಿತಿಗೆ ವಹಿಸಿರುವ ಈ ವಿಷಯದ ಬಗ್ಗೆ ಸದರಿ ಸಮಿತಿಯು ಪರಿಶೀಲಿಸಿ ಎರಡು ತಿಂಗಳೊಳಗಾಗಿ ಈ ಸದನಕ್ಕೆ ವರದಿ ನೀಡಬೇಕೆಂದು ಸೂಚಿಸುತ್ತೇನೆ. ಈ ದಿಸೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ನೀಡಿದ ಸಲಹೆಯನ್ನು ನಾನು ಒಪ್ಪಿದ್ದೇನೆ. ನಾನು ಈ ವಿಚಾರವನ್ನು ಮೊದಲೇ ಹೇಳಬೇಕಾಗಿತ್ತು. ಮಾನ್ಯ ರಾಮಕೃಷ್ಣರವರೇ, ತಾವು ಅರೇಕೆರೆ ವಿಷಯ ಪ್ರಸ್ತಾಪ ಮಾಡುವುದಾಗಿ ತಿಳಿಸಿದ್ದಿರಿ. ತಾವು ಅದನ್ನು ಈಗ ಪ್ರಸ್ತಾಪ ಮಾಡಬಹುದು. ಶೂನ್ಯ ವೇಳೆಗೆ ಅರ್ಧ ಗಂಟೆ ಮಾತ್ರ ಸಮಯವನ್ನು ನಿಗದಿ ಪಡಿಸಿಕೊಳ್ಳೋಣ. ಅದಕ್ಕಿಂತ ಹೆಚ್ಚಿನ ಸಮಯವನ್ನು ಶೂನ್ಯ ವೇಳೆಗಾಗಿ ತೆಗೆದುಕೊಳ್ಳುವುದು ಬೇಡ. ಮಾನ್ಯ ರಾಮಕೃಷ್ಣರವರು ವಿಷಯದ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಿ. ಅದಕ್ಕೆ ಸರ್ಕಾರ ಏನು ಪ್ರತಿಕ್ರಿಯೆ ತೋರಿಸಬೇಕೋ ಅದನ್ನು ತೋರಿಸುತ್ತದೆ. ನನ್ನ ಬಳಿ ಬಂದು ಯಾರ್ಯಾರು ಅನುಮತಿ ಕೇಳಿದ್ದಾರೋ, ಅಂತಹವರಲ್ಲಿ ಇವತ್ತಿಗೆ ವಿಷಯ ಪ್ರಸ್ತಾಪಿಸಲು 5-6 ಹೆಸರುಗಳನ್ನು ಪಟ್ಟಿ ಮಾಡಿರುತ್ತೇನೆ. ದಯಮಾಡಿ ಎಲ್ಲರೂ ಸಹಕರಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಮಾನ್ಯ ಶಿವನಂಜಪ್ಪನವರೇ, ತಾವು ತಮ್ಮ ವಿಷಯವನ್ನು ನಾಳೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ. ತಾವು ಯಾವಾಗಲೂ ಆ ರೀತಿ ಬಂದು ಕೇಳಿದಂತಹವರು ಅಲ್ಲ. ತಾವು 3-4 ಸಲ ಬಂದು ನನಗೆ ಕೇಳಿದ್ದೀರಿ. ನನಗೆ ಜ್ಞಾಪಕವಿದೆ, ದಯಮಾಡಿ ಸಹಕರಿಸಿ, ತಮಗೆ ನಾಳೆ ಖಂಡಿತಾ ನಾನು ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ. ಇವತ್ತು ಈಗಾಗಲೇ 5-6 ಹೆಸರುಗಳ ಪಟ್ಟಿ ಮಾಡಿಕೊಂಡಿರುತ್ತೇನೆ. ತಾವು ದಯಮಾಡಿ ಸಹಕರಿಸಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ.

(ಅ) ಭಾರತೀಯ ಜನತಾಪಾರ್ಟಿಯ ಕಾರ್ಯಕರ್ತರುಗಳ ಮೇಲೆ ದಬ್ಬಾಳಿಕೆ, ದೌರ್ಜನ್ಯ, ಹಿಂಸೆ ಹಾಗೂ ಕೊಲೆ.

+ ಶ್ರೀ ವೈ.ರಾಮಕೃಷ್ಣ (ಅನೇಕಲ್):- ಮಾನ್ಯ ಅಧ್ಯಕ್ಷರೇ, ಅತ್ಯಂತ ದುಃಖ ತರತಕ್ಕಂಥ ಸಂಗತಿಯನ್ನು ಈ ಸಭೆಯ ಮುಂದೆ ಮಂಡಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ರಾಜ್ಯದ ಅನೇಕ ಕಡೆ ನಮ್ಮ ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರುಗಳ ಮೇಲೆ, ಮುಖಂಡರುಗಳ ಮೇಲೆ, ಅನೇಕ ಸ್ಥಳೀಯ ಸಂಸ್ಥೆಗಳ ಮೆಂಬರುಗಳ ಮೇಲೆ, ಶಾಸಕರುಗಳ ಮೇಲೆ ದಬ್ಬಾಳಿಕೆ, ದೌರ್ಜನ್ಯ, ಹಿಂಸೆ, ಖೂನಿ ಇವುಗಳು ನಡೆಯುತ್ತಿವೆ. ಇವುಗಳ ಬಗ್ಗೆ ಅನೇಕ ಸಾರಿ ನಾನು ಸರ್ಕಾರದ ಗಮನ ಸೆಳೆಯಲಿಕ್ಕೆ ಇಚ್ಛಪಟ್ಟಿದ್ದೆ ಮತ್ತು ಸಭೆಯಲ್ಲೂ ಕೂಡ ಪ್ರಸ್ತಾಪ ಮಾಡಿದಾಗ, ಎರಡು ಬಾರಿ ಚರ್ಚೆ ಆದಾಗ ಕಾಲಾವಕಾಶ ಇಲ್ಲದೇ ಅದನ್ನು ಮುಂದುವರೆಸಿದ್ದು ಆಯಿತು. ಇದು ಇಷ್ಟಕ್ಕೆ ನಿಲ್ಲುತ್ತದೆ ಎಂದು ನಾನು

ಭಾವಿಸಿಕೊಂಡಿಲ್ಲ. ಇದರ ವ್ಯಾಪ್ತಿ ಬಹಳ ಜಾಸ್ತಿಯಾಗುತ್ತಿದೆ. ಇದನ್ನು ನಾನು ಅಧ್ಯಕ್ಷರ ಅಪ್ಪಣೆ ಬೇಡಿ ತಂದಿರತಕ್ಕ ಉದ್ದೇಶ ಏನು ಎಂದರೆ, ನಮ್ಮ ಈ ಮನೆಯ ಸದಸ್ಯರಾಗಿದ್ದಂತಹ ಶ್ರೀ ಚಿತ್ತರಂಜನ್ ಅವರ ಕೊಲೆ ಆಯಿತು. ಅದೇ ರೀತಿ ಪಾವಗಡದಲ್ಲಿ ಶ್ರೀ ವೆಂಕಟೇಶ್ ನಾಯ್ಡು ಎಂಬುವರ ಕೊಲೆಯಾಯಿತು. ಸವಣೂರಿನಲ್ಲಿ ನಮ್ಮ ಬಿ.ಜೆ.ಪಿಯ ವೈಸ್ ಪ್ರೆಸಿಡೆಂಟ್ ಅವರನ್ನು ಬಾಯಿ ಕಟ್ಟಿ, ಕೈ ಕಾಲು ಕಟ್ಟಿ, ಹುಲ್ಲಿನ ಬಣವೆಗೆ ಹಾಕಿ ಸುಟ್ಟಿದ್ದಾಯಿತು. ಆ ದೃಶ್ಯವನ್ನು ನಾನು ಹುಬ್ಬಳ್ಳಿಗೆ ಹೋಗಿದ್ದಾಗ ನೋಡಿದೆ. ಬಹುಶಃ ಇವುಗಳನೆಲ್ಲ ಮರೆಯಲಿಕ್ಕಾಗುವುದಿಲ್ಲ. ಅಷ್ಟು ಭಯಂಕರವಾಗಿ ಹಿಂಸೆ ಪಡುತ್ತಿದ್ದಾರೆ. ದಿನಾಂಕ 13.7.96ರಲ್ಲಿ ಹೊಸಕೋಟೆಯಲ್ಲಿ ಶ್ರೀ ಮಂಚುನಾಥ್ ಎನ್ನತಕ್ಕ ಒಬ್ಬ ಬಿ.ಜೆ.ಪಿ. ನಾಯಕರನ್ನು ಆರೂವರೆ ಗಂಟೆಗೆ ತೆಗೆದುಕೊಂಡು ಹೋಗಿ ಏಳೂವರೆ ಗಂಟೆಗೆ ಖೂನಿ ಮಾಡಿ ತೆಗೆದುಕೊಂಡು ಬಂದು ಅಲ್ಲಿ ಹಾಕಿದ್ದಾರೆ. ಜೊತೆಗೆ ಶ್ರೀ ಗೋಪಾಲ್ ಎನ್ನತಕ್ಕ ಒಬ್ಬ ಕಾರ್ಯಕರ್ತ ಮರಣಾಂತಿಕವಾಗಿ ಹಲ್ಲೆಗೀಡಾಗಿ ಸೆಂಟ್ ಜಾನ್ಸ್ ಹಾಸ್ಪಿಟಲ್‌ನ ಇಂಟೆನ್ಸೀವ್ ಕೇರ್ ವಾರ್ಡ್‌ನಲ್ಲಿ ಹಾಕಿದ್ದಾರೆ. ಇದರ ಜೊತೆಗೆ ಅನೇಕ ಕಾರ್ಯಕರ್ತರ ಮೇಲೆ, ಕೇಸುಗಳನ್ನು ಹಾಕಿದ್ದಾರೆ. ಶಾಸಕರ ಮೇಲೆ, ಮಾನ್ಯ ಶ್ರೀ ಅಪ್ಪಚ್ಚು ರಂಜನ್‌ರವರ ಮೇಲೆ, ಶ್ರೀ ಐ.ಎಂ.ಜಯರಾಮಶೆಟ್ಟಿ ಅವರ ಮೇಲೆ, ಶ್ರೀ ಕುಂಬ್ಳೆ ಸುಂದರರಾವ್ ಅವರ ಮೇಲೆ ಅನೇಕ ಕೇಸ್‌ಗಳನ್ನು ಹಾಕಿದ್ದಾರೆ. ಇದಕ್ಕೆಲ್ಲಾ ಏನು ಕಾರಣ? ಇದು ಸರ್ಕಾರಕ್ಕೆ ನಾನು ಕೇಳತಕ್ಕಂಥ ಪ್ರಶ್ನೆ. ಒಂದು ವೇಳೆ ಅಫೆನ್ಸ್ ಕಮಿಟ್ ಮಾಡಿದ್ದರೆ, ಈ ರೀತಿ ಕೇಸ್ ಹಾಕಬಹುದಾಗಿತ್ತು. ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಒಂದು ವಾರದಲ್ಲಿ ಅಲ್ಲಿ ಒಬ್ಬ ಮುನಿಸಿಪಾಲಿಟಿ ಅಧಿಕಾರಿ ಯಾರೋ ಒಬ್ಬರು ಚೀಫ್ ಆಫೀಸರ್‌ರೊಬ್ಬರು ಒಬ್ಬ ಮುಸ್ಲಿಮ್‌ರ ಮನೆಯನ್ನು ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಅಂತ ಹೊಡೆದು ಹಾಕಿದ್ದಾರೆ. ಲೈಸೆನ್ಸ್ ತೆಗೆದುಕೊಂಡು ಮನೆ ಕಟ್ಟಿದ್ದರು, ಆದರೆ ಲಂಚ ಕೊಡಲಿಲ್ಲವೆಂದು ಅವರು ಆಪಾದನೆ ಮಾಡಿ ಮನೆ ಹೊಡೆದು ಹಾಕಿದ್ದಾರೆ. ಅದನ್ನು ತಡೆಗಟ್ಟಿದ್ದಕ್ಕೋಸ್ಕರ ಅವರನ್ನೆಲ್ಲಾ ಅರೆಸ್ಟ್ ಮಾಡಿದ್ದಾರೆ, ಯಾರನ್ನು ಎಂದರೆ ಮುನಿಸಿಪಲ್ ಪ್ರೆಸಿಡೆಂಟ್, ವೈಸ್ ಪ್ರೆಸಿಂಡೆಂಟ್, ಕೌನ್ಸಲರ್ಸ್, ಎಷ್ಟು ಜನ ಕೌನ್ಸಲರ್ಸ್ ನಮ್ಮ ಪಕ್ಷದಿಂದ ಇದ್ದರೋ, ಅವರೆಲ್ಲರಿಗೂ ಕೂಡ ಅರೆಸ್ಟ್ ಮಾಡಿದ್ದಾರೆ. ಈ ರೀತಿಯ ಒಂದು ಬೆಳವಣಿಗೆ ಈ ರಾಜ್ಯದಲ್ಲಿ ಆಗುತ್ತಿದೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಅದರಲ್ಲೂ ಬೆಂಗಳೂರು ಜಿಲ್ಲೆಯಲ್ಲಿ ಅತಿ ಹೆಚ್ಚಾಗಿ ನಡೆಯುತ್ತಿದೆ. ನನ್ನ ಕ್ಷೇತ್ರವೊಂದರಲ್ಲೇ ಸುಮಾರು ಕಳೆದ ಒಂದೂವರೆ ವರ್ಷದಲ್ಲಿ 25 ಖೂನಿಗಳಾಗಿವೆ. ಅದನ್ನೆಲ್ಲಾ ಹೇಳುವುದಕ್ಕೆ ನನಗೆ ಟೈಮ್ ಇಲ್ಲ. ಖೂನಿ ಆದವರ ಫೋಟೋಗಳು ನನ್ನ ಜೇಬಿನಲ್ಲೇ ಇವೆ. ಮಾನ್ಯ ಉಪಾಧ್ಯಕ್ಷರು ದಯಮಾಡಿ ಅವುಗಳನ್ನು ನೋಡಬೇಕು. ಅವರೆಲ್ಲಾ ಇನ್ನೂ ಯುವಕರು.

(ಈ ಹಂತದಲ್ಲಿ ಮಾನ್ಯ ರಾಮಕೃಷ್ಣರವರು ತಮ್ಮ ಜೇಬಿನಿಂದ ಕೆಲವೊಂದು ಫೋಟೋಗಳನ್ನು ಮಾನ್ಯ ಉಪಾಧ್ಯಕ್ಷರಿಗೆ ನೀಡಿದರು)

ಇದನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆ ಎಂದರೆ, ಬಹುಶಃ ಪೋಲೀಸರ ಮನೋಭಾವ ಏನಾಗಿದೆ ಎಂದರೆ ಸರ್ಕಾರ ಹೇಳಿದಂತೆ ಕೇಳಬೇಕು, ಸರ್ಕಾರ ಯಾವ ರೀತಿ ಹೇಳುತ್ತದೋ ಆ ರೀತಿ ಕೇಳಬೇಕು ಅಥವಾ ಸೂಮೋಟೋ ಸರ್ಕಾರಕ್ಕೆ ನಾವು ಸಪೋರ್ಟ್ ಮಾಡಬೇಕು, ನ್ಯಾಯಕ್ಕಲ್ಲ, ರೂಲ್‌ಗೆ ಅಲ್ಲ, ಸಂವಿಧಾನಕ್ಕಲ್ಲ, ಅಥವಾ ಕ್ರಿಮಿನಲ್ ಪ್ರೊಸೀಜರ್ ಕೋಡ್, ಸಿವಿಲ್ ಪ್ರೊಸೀಜರ್ ಕೋಡ್, ಎವಿಡೆನ್ಸ್ ಆಕ್ಟ್ ಇವುಗಳಿಗೊಂದಕ್ಕೂ ಮನ್ನಣೆ ಇಲ್ಲದೆ ಬರೀ ರಾಜಕೀಯ ಪಕ್ಷಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ನಮ್ಮ ಪಕ್ಷದ ಕಾರ್ಯಕರ್ತರಿಗೆ, ಮುಖಂಡರುಗಳಿಗೆ ಈ ರೀತಿ ಕಿರುಕುಳ ಕೊಡತಕ್ಕದ್ದು ನಿಜವಾಗಿಯೂ ವ್ಯಥೆ ಪಡತಕ್ಕ ವಿಚಾರವಾಗಿದೆ. ನಾನು ಇದನ್ನು ಬಹಳ ಮನನೊಂದು ಹೇಳುತ್ತಿದ್ದೇನೆ. ಇವತ್ತು ಬೆಂಗಳೂರು (ಉತ್ತರ) ತಾಲ್ಲೂಕು ಇರಬಹುದು, ಹೊಸಕೋಟೆ ತಾಲ್ಲೂಕು ಇರಬಹುದು, ದೇವನಹಳ್ಳಿ ತಾಲ್ಲೂಕು ಇರಬಹದು, ಆನೇಕಲ್ ತಾಲ್ಲೂಕು ಇರಬಹುದು, ನಾವ್ಯಾರೂ ಅಲ್ಲಿ ವಾಸ ಮಾಡುವುದಕ್ಕಾಗುವುದಿಲ್ಲ ಎನ್ನುವ ರೀತಿಯಲ್ಲಿ ಕೊಲೆಗಳಾಗುತ್ತಿವೆ. ಇದರ ವಿಚಾರದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಕಾಗದ ಬರೆದು. ಕಾನ್ಫಿಡೆನ್‌ಷಿಯಲ್ ಲೆಟರ್ ಎಂದು ಹಾಕಿದೆ. ದಿನಾಂಕ 24ನೇ ಜೂನ್‌ನಲ್ಲಿ ಅವರ ಮನೆಗೆ ಹೋಗಿದ್ದೆ. ಸ್ವಾಮಿ ಹೀಗೆ ನಡೆದಿದೆ, ದಯವಿಟ್ಟು ಇದನ್ನು ತಾವು ವಿಚಾರಣೆ ಮಾಡಬೇಕು ಎಂದೆ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ರಾಮಕೃಷ್ಣರವರೇ, ಐ.ಜಿ.ಯವರು, ನಾನು ಮತ್ತು ನೀವು ಮೂವರೇ ಈ ವಿಚಾರವನ್ನು ಚರ್ಚೆ ಮಾಡೋಣ. ನಾನು ನಿಮ್ಮನ್ನು ಕರೆಸಿಕೊಳ್ಳುತ್ತೇನೆ ಎಂದಿದ್ದರು. ಇದುವರೆವಿಗೂ ಕರೆಸಿಕೊಳ್ಳಲೇ ಇಲ್ಲ. ಇದಾದ ಮೇಲೆಯೇ ಐದು ಖೂನಿಗಳಾಗಿವೆ. ಇದನ್ನು ನಾವು ಎಲ್ಲಿಗೆ ತೆಗೆದುಕೊಂಡು ಹೋಗಬೇಕು, ಎಲ್ಲಾದರೂ ಒಂದು ಕಡೆಗೆ ತೆಗೆದುಕೊಂಡು ಹೋಗಬೇಕಲ್ಲ? ಇದಕ್ಕೆ ಕಾರಣ ಏನು ಅಂತ ಹೇಳಿದರೆ, ವಿಲೇಜ್ ಪಂಚಾಯತ್ ಲೆವೆಲ್‌ನಿಂದ ಹಿಡಿದು ಪಾರ್ಲಿಮೆಂಟಿನವರಿಗೆ ಒಂದು ಪಕ್ಷ ಅಧಿಕಾರದಲ್ಲಿದೆ, ಎಲ್ಲಾ ಹಂತಗಳಲ್ಲೂ. ಬಹುಶಃ ಇದು ಏನಾಗಿದೆ ಎಂದರೆ ಅವರ ಪಕ್ಷದ ಕೆಲವು ಜನರಿಗೆ ಕುಮ್ಮಕ್ಕು ನೀಡಿದೆ, ನಮ್ಮದೇ ಸರ್ಕಾರ ಇದೆ ಅಂತ. ಅದಕ್ಕೆ ನಾನು ಹೇಳುತ್ತಿದ್ದೇನೆ, ಆ ಹುಮ್ಮಸ್ಸು ಇರಲಿ, ಪಕ್ಷವನ್ನು ಬೆಳೆಸುವುದರಲ್ಲಿ ಅಥವಾ ವ್ಯಕ್ತಿಗೆ ನಿಷ್ಠೆ ಇಡುವುದರಲ್ಲಿ ಹುಮ್ಮಸ್ಸು ಇರಲಿ, ಆ ರೀತಿಯ ಹುಮ್ಮಸ್ಸು ಬೇಡ ಎನ್ನುವುದಿಲ್ಲ. ಆದರೆ ಬೇರೆ ಪಕ್ಷಗಳನ್ನು ನಾಶ ಮಾಡತಕ್ಕಂತಹ ಪ್ರವೃತ್ತಿಗೆ ಕೈ ಹಾಕುವುದನ್ನು ತಡೆಗಟ್ಟಬೇಕು. ಇದು ಬಹಳ ಮುಖ್ಯ. ಆದರೆ ಇದು ನಡೆಯುತ್ತಿಲ್ಲ. ಅದರ ದೆಸೆಯಿಂದ ಏನು ನಡೆಯುತ್ತಿದೆ ಇವತ್ತು, ನಾವು ಖೂನಿಗೆ ಒಳಗಾಗುತ್ತಿದ್ದೇವೆ, ತೀವ್ರವಾದ ಹಿಂಸೆಗಳಿಗೆ ಒಳಗಾಗಿದ್ದೇವೆ, ಕೈ ಕಾಲು ಮುರಿದಿದ್ದಾರೆ, ಇಷ್ಟೆಲ್ಲಾ ಆಗಿದೆ. ಧಾರವಾಡ ಜಿಲ್ಲೆಯ ಸವಣೂರಿನಲ್ಲಿ ವೈಸ್ ಪ್ರೆಸಿಡೆಂಟ್ ಅನ್ನು ಬೆಂಕಿಯಲ್ಲಿ ಸುಟ್ಟಿದ್ದಾರೆ.

1. 10 ಪಿ.ಎಂ.

ಅವರು 15 ಜನರಲ್ಲಿ ಕೇವಲ 10 ಜನರನ್ನು ಅರೆಸ್ಟ್ ಮಾಡಿದ್ದಾರೆ. ಇನ್ನು ಐದು ಜನರನ್ನು ಅರೆಸ್ಟ್ ಮಾಡಿಲ್ಲ. ಈ ಎಲ್ಲಾ ಖೂನಿ ಕೇಸ್‌ಗಳಲ್ಲಿ ಖೂನಿ ಮಾಡಿದವರನ್ನು ಉದ್ದೇಶಪೂರ್ವಕವಾಗಿ ಪತ್ತೆ ಹಚ್ಚುವುದಕ್ಕೆ ಇವರು ಕಾರ್ಯಕ್ರಮ ಹಾಕಿಕೊಂಡಿಲ್ಲ. ಧೈರ್ಯವಾಗಿ ಹೇಳುತ್ತಿದ್ದೇನೆ. ಪೋಲಿಸ್ ಅಧಿಕಾರಿಗಳು ನಿಸ್ಪಕ್ಷಪಾತವಾಗಿ ಕೆಲಸ ಮಾಡಬೇಕು, ಅಷ್ಟು ನಿಷ್ಪಕಪಾತವಾಗಿ ಮತ್ತು ಕಾನೂನು ಬದ್ಧವಾಗಿ ಇವರು ಕೆಲಸ ಮಾಡುತ್ತಿಲ್ಲ. ಪಕ್ಷ ಬೆಳೆಸುವ ಕಡೆ ಅವರು ಆಲೋಚನೆ ಮಾಡುತ್ತಿದ್ದಾರೆ. ಮತ್ತು ಅಧಿಕಾರಿಗಳು ಅದಕ್ಕೆ ಕುಮ್ಮಕ್ಕು ಕೊಡುತ್ತಿದ್ದಾರೆ. ಇದನ್ನು ತಡೆ ಹಿಡಿಯುವುದು ನಮ್ಮ ಕರ್ತವ್ಯವೆಂದು ಹೇಳುತ್ತೇನೆ. 8.7.96ರಂದು ಬೆಂಗಳೂರಿನ ಉತ್ತರ ತಾಲ್ಲೂಕಿಗೆ ಸೇರಿದ ಅರಕೆರೆ ಗ್ರಾಮದಲ್ಲಿ ಒಂದು ಬೃಹತ್ ಸ್ವರೂಪದ ಗಲಭೆ, ಘರ್ಷಣೆ ಮತ್ತು ಹಿಂಸಾಚಾರ ನಡೆಯಿತು. ಸ್ವಾಮಿ ಇದನ್ನು ಮಾಡಿದವರು ಯಾರು? ಆ ಗಲಭೆಯಲ್ಲಿ ನಮ್ಮ ಪಕ್ಷದ ಮುಖಂಡರು ಮೂರು ಜನ ಸ್ಥಳದಲ್ಲಿ ಖೂನಿಯಾಗಿದ್ದಾರೆ. ಯಾರ್ಯಾರು ಎಂದರೆ,

ಒಬ್ಬ ಮಾನ್ಯ ಸದಸ್ಯರು:- ಅದು ಪಕ್ಷದ ವತಿಯಿಂದ ಆಗಿಲ್ಲ, ಜಮೀನಿನ ಗಲಭೆಯಿಂದ ಆಗಿದೆ ಎಂದು ಕಾಣುತ್ತದೆ.

ಶ್ರೀ ವೈ.ರಾಮಕೃಷ್ಣ:- ನಾನು ಹೇಳುತ್ತೇನೆ, ನಾನು ಹೇಳಿದ ಮೇಲೆ ತಾವು ದಯವಿಟ್ಟು ಹೇಳಿದರೆ ಅದನ್ನು ಒಪ್ಪಿಕೊಳ್ಳುತ್ತೇನೆ. ಈಗ ಚಿಕ್ಕಣ್ಣಪ್ಪ ಎನ್ನತಕ್ಕಂತಹವರು ಖೂನಿಗೆ ಒಳಗಾಗಿರತಕ್ಕಂತಹ ಆ ಗ್ರಾಮದ ಬಿ.ಜೆ.ಪಿ. ಮುಖಂಡರು. ಅವರಿಗೆ 39ವರ್ಷ ವಯಸ್ಸು. ಮೂರು ಹೆಣ್ಣು ಮಕ್ಕಳು, ಮತ್ತು ವಿಧವೆ, ಆ ದೃಶ್ಯ ನೋಡಬೇಕಾದರೆ, ಬಹುಶಃ ಅದು ನಾನು ವರ್ಣನೆ ಮಾಡುವುದಕ್ಕಾಗುವುದಿಲ್ಲ. ನಾನು ನಮ್ಮ ಅಧ್ಯಕ್ಷರಾದ ಶ್ರೀ ಈಶ್ವರಪ್ಪನವರು ಹೋಗಿ ನೋಡಿಕೊಂಡು ಬಂದಿದ್ದೇವೆ. ಅದಾದ ಮೇಲೆ ನಮ್ಮ ಖರ್ಗೆಯವರೂ ಕೂಡ ಹೋಗಿದ್ದರು, ಅದು ನೋಡಬೇಕಾದ ದೃಶ್ಯ, ಮನೆ ಮೇಲ್ಚಾವಣೆ ಚಪ್ಪಡಿ ಕಲ್ಲು ಹೊಡೆದು ಹಾಕಿದ್ದಾರೆ, ಚಪ್ಪಡಿ ಕಲ್ಲುಗಳನ್ನು ಮೀಟಿ ಹೊಡೆದು ಒಳಗೆ ನುಗ್ಗಿ ಹೋಗಿ ಖೂನಿ ಮಾಡಿದ್ದಾರೆ. ಕಾರಣ ಏನೇ ಇರಲಿ, ಕಾರಣ ಏನೂ ಇಲ್ಲ, ಒಂದು 2-3 ಎಕರೆ ಇವನಿಗೆ ಸಂಬಂಧಪಟ್ಟಂತಹ ಜಮೀನು ಕೋರ್ಟಿನಲ್ಲಿ ಬಿ.ಜೆ.ಪಿ.ಯವರ ಕಡೆ ಆಗಿದ್ದು ಇದನ್ನು ಸಹಿಸಲಾರದೆ, ಇವತ್ತು ಅವನು ಖೂನಿಗೆ ಒಳಗಾಗಿದ್ದಾನೆ. ಇಷ್ಟೇ ಫ್ಯಾಕ್ಟ್ಸ್ ಇರತಕ್ಕಂಥದ್ದು. ಮೊದಲನೆಯದು. ಎರಡನೆಯದು, ವೆಂಕಟಾಚಲಪ್ಪ 35 ವರ್ಷ ವಯಸ್ಸು ಅವನನ್ನು ಕ್ಲೀನಾಗಿ ಕೊಲೆ ಮಾಡಿ ಬಿಟ್ಟರು.

ಅವರಿಗೂ ಕೂಡ ಮೂರು ಹೆಣ್ಣು ಮಕ್ಕಳು ಮತ್ತು ವಿಧವೆ ಮತ್ತು ತಂದೆ ತಾಯಿ ಇದ್ದಾರೆ. ಮೂರನೆಯವರು ರಾಮಕೃಷ್ಣ ಎಂದು ಸಿದ್ಧಾರಾಮಯ್ಯನವರ ಮಗ ಅವನಿಗೂ ಕೇವಲ 30 ವರ್ಷ. ಅವನಿಗೆ ಮೂರು ಹೆಣ್ಣು ಮಕ್ಕಳು ಇದ್ದಾರೆ. ಎಲ್ಲರಿಗೂ ಮೂರು ಮೂರು ಹೆಣ್ಣು ಮಕ್ಕಳು ಮತ್ತು ಇವರಿಗೆ ಒಬ್ಬ ಗಂಡು ಮಗ ಅಂದರೆ 10 ಜನ

ತಬ್ಬಲಿಗಳು ಇವತ್ತಿನ ದಿವಸ ಇದ್ದಾರೆ. ಮೂರು ವಿಧವೆಯರಿದ್ದಾರೆ, ಮನೆಗಳು ಇಲ್ಲ, ಮನೆಗಳನ್ನು ಹೊಡೆದು ಹಾಕಿದ್ದಾರೆ, ಹೆಂಚು ಪುಡಿ ಪುಡಿ ಮಾಡಿದ್ದಾರೆ, ಚಪ್ಪಡಿ ಕಲ್ಲು ಹೊಡೆದು ಹಾಕಿದ್ದಾರೆ. ಕಿಟಕಿ ಕಂಬಿ ಕಿತ್ತಿದ್ದಾರೆ. ಘೋರ ಕೃತ್ಯಗಳನ್ನು ಇವತ್ತಿನ ದಿವಸ ಯಾರು ಮಾಡಿದ್ದು, ಯಾರು ಎಸಗಿದ್ದಾರೆ, ಏಕೆಂದರೆ ಎಫ್.ಐ.ಆರ್. ಹಾಕಿರುವುದರಿಂದ ನಾನು ಮೆರಿಟ್ಸ್‌ಗೆ ಹೋಗುವುದಿಲ್ಲ. ಏನಾಯಿತು ವಿಷಯ ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು ಒಬ್ಬರು ಹೊನ್ನೇಗೌಡರು ಎನ್ನತಕ್ಕಂತಹ ನಾಯಕರು, ಅವರು ಕಾಂಗ್ರೆಸ್ ನಾಯಕರಾಗಿದ್ದರು, ಅವರು ದಳಕ್ಕೆ ಸೇರಿದರು. ದಳಕ್ಕೆ ಸೇರಿದ ದಿವಸ ಒಂದು ವಿಜೃಂಭಣೆಯಿಂದ ಫಂಕ್ಷನ್ ಆಯಿತು, ಅದಕ್ಕೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾಗಿದ್ದಂತಹ ದೇವೇಗೌಡರು ಮತ್ತು ಇಬ್ರಾಹಿಂರವರು ಹೋಗಿದ್ದರು. ಬಹುಶಃ ಇದೇ ಅವರ ಕ್ವಾಲಿಫಿಕೇಷನ್. ಮುಖ್ಯಮಂತ್ರಿಗಳು ಮತ್ತು ಜನತಾ ದಳದ ಅಧ್ಯಕ್ಷರು ನಮ್ಮ ಮನೆಗೆ ಬಂದಿದ್ದರು, ನಾನು ಇಲ್ಲಿ ಯಾರನ್ನೂ ಏನೂ ಚೇಂಜ್ ಮಾಡಬೇಕಾಗಿಲ್ಲ ಎಂದು ಹೇಳಿ ಅವತ್ತಿನಿಂದ ಈ ಜಗಳ ಪ್ರಾರಂಭವಾಯಿತು. ಅವರು ಹೇಳಿದ ಹಾಗೆ ನಾವು ಕೇಳಬೇಕು, ಅಲ್ಲಿ ಏನು ಪಂಚಾಯಿತಿ ಇದೆ ಅದರಲ್ಲಿ 10 ಜನ ಜನತಾದಳದವರು, ನಾವು ಕೇವಲ ಮೂರು ಜನ, ಸೊಸೈಟಿ ಅವರ ಕೈಯಲ್ಲಿ ಇದೆ. ಸಹಕಾರ ಸಂಘ ಅವರ ಕೈಯಲ್ಲಿದೆ. ಹಾಲು ಸೊಸೈಟಿ ಅವರ ಕೈಯಲ್ಲಿದೆ. ನ್ಯಾಯವಾಗಿ ನೋಡಿದರೆ ಯಾರು ಮೈನಾರಿಟಿ ಇದ್ದಾರೆ, ಅವರಿಗೆ ರಕ್ಷಣೆ ಕೊಡಬೇಕು. ಬಿ.ಜೆ.ಪಿ. ಬೆಳಯಬಾರದು ಎನ್ನತಕ್ಕಂತಹ ಒಂದೇ ಒಂದು ಉದ್ದೇಶದಿಂದ ಇವತ್ತು ನಾನು ಈ ಸ್ಟೇಟ್‌ಮೆಂಟ್ ರೆಕಾರ್ಡ್ ಮಾಡಿದ್ದು ಸಾರ್ವಜನಿಕರ ಮುಂದೆ. ನೂರಾರು ಜನ ಪೋಲೀಸ್‌ನವರೂ ಇದ್ದರು, ಸಾರ್ವಜನಿಕರೂ ಇದ್ದರು. ಅವರು ಹೇಳಿದ್ದಾರೆ, ನಮ್ಮದು ಒಂದೇ ಒಂದು ಗುರಿ, ಬಿ.ಜೆ.ಪಿ. ಬೆಳೆಯಬಾರದು, ಬಿ.ಜೆ.ಪಿ ಕಾರ್ಯಕರ್ತರು ಈ ಗ್ರಾಮದಲ್ಲಿ ಇರಬಾರದು, ಗ್ರಾಮ ಬಿಟ್ಟು ಹೊರಡಬೇಕು. ಇಲ್ಲದೇ ಇದ್ದರೆ, ಪ್ರಾಣ ಹತ್ಯೆ ಮಾಡುತ್ತೇವೆ, ಎಂದು ಹೇಳಿದ್ದನ್ನೂ ನೂರಾರು ಜನರ ಎದುರಿಗೆ ನಾನು ಬರೆದುಕೊಂಡ ಸ್ಟೇಟ್‌ಮೆಂಟ್ ಇದು. ಇವತ್ತು ಈ ರೀತಿ ಕೊಲೆ ಮಾಡಿದವರು ಯಾರು ವಿಲೇಜ್ ಪಂಚಾಯಿತಿ ಛೇರ್ಮನ್, ವಿಲೇಜರ್ಸ್‌ನ್ನು ಕಾಪಾಡಬೇಕಾದಂತಹ ವಿಲೇಜ್ ಪಂಚಾಯಿತಿ ಛೇರ್ಮನ್ ಮತ್ತು ಎಕ್ಸ್ ಛೇರ್ಮನ್, ವಿಲೇಜ್ ಪಂಚಾಯಿತಿ ಛೇರ್ಮನ್ ವೆಂಕಟಾಚಲಯ್ಯ ಮತ್ತು ಎಕ್ಸ್ ಛೇರ್ಮನ್ ಜಯರಾಮಯ್ಯ. ಇಷ್ಟು ಹತ್ಯೆಗಳನ್ನು ಅವರು ಮಾಡಿ ಕೊನೆಗೆ ಅರೆಸ್ಟ್ ಮಾಡಿದ್ದಾರಾ? ಇಬ್ಬರನ್ನು ಅರೆಸ್ಟ್ ಮಾಡಿದ್ದಾರೆ, ಇನ್ನೊಬ್ಬರನ್ನು ಏನು ಮಾಡಿದ್ದಾರೆ, ಇದಕ್ಕೆಲ್ಲಾ ಮೇಟಿ ಆಗಿದ್ದರಲ್ಲ, ಹೆಡ್ ಅವರು ಡೆಲ್ಲಿಗೆ ಹೊರಟು ಹೋದರಂತೆ. ನನಗೆ ಗೊತ್ತಿಲ್ಲ, ನಾನು ಅಲ್ಲೇ ಬರೆದುಕೊಂಡಿದ್ದೇನೆ, ದೆಹಲಿಗೆ ಹೋದರು, ಮಹಮ್ಮದ್ ಎಂಬ ಒಬ್ಬ ಮನುಷ್ಯ ಬಂದು ಇವರನ್ನು ಡೆಲ್ಲಿಗೆ ಕರೆದುಕೊಂಡು ಹೋದ, ಅವರನ್ನು ಅರೆಸ್ಟ್ ಮಾಡುವುದಕ್ಕೆ ಆಗಲಿಲ್ಲ. ಯೋಚನೆ ಮಾಡಿ ನೋಡಿ ನಾವು ಎಲ್ಲಿಗೆ ಹೋಗಬೇಕು, ಇವತ್ತು ಅಲ್ಲಿ ದೊಡ್ಡ ವಾರ್ ನಡೆಯುತ್ತಿದೆ. ವಾರ್ ಸೀನ್ ಯಾವ ರೀತಿ ಇರುತ್ತದೆ. ಆ ಸೀನ್ ತಾವು ಅಲ್ಲಿ

ನೋಡಬಹುದು. ಇದರಿಂದ ನಮಗೆ ಭಯ ಆಗಿದೆ, ಪಕ್ಷ ಕಟ್ಟತಕ್ಕಂಥದ್ದು ನಮ್ಮ ಬೆಂಗಳೂರು ಜಿಲ್ಲೆಯಲ್ಲಿ ನಾನು ಬಹುಶಃ ಮುಖ್ಯ ಮಂತ್ರಿಗಳಿದ್ದರೆ ನಾನು ಅವರಿಗೆ ಹೇಳುತ್ತಿದ್ದೆ, ಆಡಳಿತ ನಡೆಸುವುದನ್ನು ಕಲಿಯಬೇಕು, ನಾನು ಧೈರ್ಯವಾಗಿ ಹೇಳುತ್ತೇನೆ. ಒಂದೇ ಪಕ್ಷದ ಒಂದು ಕಮ್ಯುನಿಟಿಯವರಿಗೆ ಹಾಕುವುದು ಅಲ್ಲ, ಕಾನ್‌ಸ್ಟೇಬಲ್‌ನಿಂದ ಹಿಡಿದು ಐ.ಜಿ.ಪಿ.ಯವರೆಗೆ ಒಂದೇ ಕಮ್ಯುನಿಟಿಯವರನ್ನು ಹಾಕುವುದು ಅಲ್ಲ. hierarchy ಯಲ್ಲಿ ಎಲ್ಲಾ ಕಮ್ಯುನಿಟಿಯವರಿಗೂ ಅವಕಾಶ ಕೊಡಬೇಕು. ಎಎಸ್‌ಪಿ, ಡಿಎಸ್‌ಪಿ, ಡಿಐಜಿ, ಸರ್ಕಲ್ ಇನ್‌ಸ್ಪೆಕ್ಟರ್, ಮತ್ತು ಇನ್‌ಸ್ಪಕ್ಟರ್ ಎಲ್ಲರನ್ನೂ ಒಂದೇ ಕಮ್ಯುನಿಟಿಯವರನ್ನು ಹಾಕಿದರೆ ನ್ಯಾಯ ಎಲ್ಲಿ ಸಿಗುತ್ತದೆ ಎಂದು ನಾನು ಕೇಳುತ್ತಿದ್ದೇನೆ. ನ್ಯಾಯ ಯಾವ ರೀತಿ ಸಿಗುತ್ತದೆ, ಕಡೆಗೆ ಸಾಮಾಜಿಕ ನ್ಯಾಯ ಖಂಡಿತವಾಗಿ ಸಿಗುತ್ತಾ, ಅವರೆಲ್ಲರ ಉದ್ದೇಶ ಒಂದೇ ಒಂದು. ಬಿ.ಜೆ.ಪಿ.ಗೆ ಬಲಿ ಹಾಕಬೇಕು, ಬಿ.ಜೆ.ಪಿ.ಯವರನ್ನು ಇಲ್ಲಿ ತರಬಾರದು, ಎನ್ನುವುದು ಒಂದೇ ಉದ್ದೇಶವಾಗಿದೆ. ಇದಕ್ಕೋಸ್ಕರ ನಾವು ಬಹಳ ಮನಸ್ಸು ನೊಂದುಕೊಂಡಿದ್ದೇವೆ. ಇದರ ಬಗ್ಗೆ ನಮ್ಮ ಆನೇಕಲ್ ಮತ್ತು ಹೊಸಕೋಟೆಯಲ್ಲಿ ಸತ್ತವರ ಬಗ್ಗೆ ಒಂದು ಲಿಸ್ಟ್ ಇದೆ. ಅವರ ಫೋಟೋ ನನ್ನ ಹತ್ತಿರ ಇದೆ. ಇವರು ಎಲ್ಲಿ ಹೋಗುತ್ತಾರೆ, ಎಲ್ಲಿ ಓಡಿ ಹೋಗುತ್ತಾರೆ. ಏಕೆ ಅರೆಸ್ಟ್ ಮಾಡುವುದಿಲ್ಲ ಅವರಿಗೆ, ಯಾರು ರಕ್ಷಣೆ ಕೊಡುವವರು ಆ ಪಾರ್ಟಿಯವರೇ ರಕ್ಷಣೆ ಕೊಡುತ್ತಿರುವುದು ಅಂತ ಇವತ್ತು ಧೈರ್ಯವಾಗಿ ತುಂಬಿದ ಈ ಸಭೆಯಲ್ಲಿ ನಾನು ಹೇಳುತ್ತಿದ್ದೇನೆ ಬೇಕಾದರೆ ಅವರ ಹೆಸರು ಹೇಳುತ್ತೇನೆ. ಅರೆಸ್ಟ್ ಮಾಡಿಸುತ್ತೀರೋ? ಅರೆಸ್ಟ್ ಮಾಡುವ ಶಕ್ತಿ ಇದೆಯೇ? ಶಕ್ತಿ ಇಲ್ಲ, ನಾನು ಧೈರ್ಯವಾಗಿ ಹೇಳುತ್ತೇನೆ. ಇವತ್ತಿನ ದಿವಸ ಬೇರೆ ಬೇರೆಯವರ ಪ್ರೊಟೆಕ್ಷನ್‌ನಲ್ಲಿ ಇದ್ದಾರೆ. ಇದು ಅತ್ಯಂತ ಹೀನಕರವಾದ ವಿಚಾರ, ಬಹುಶಃ ಇದಕ್ಕೆ ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕು. ಈ ವಿಚಾರ ಎಷ್ಟು ತೀಕ್ಷ್ಣತೆ ಪಡೆದಿದೆ ಎಂದರೆ, ಬೆಂಗಳೂರು ಜಿಲ್ಲೆಯಲ್ಲಿ ನಡೆದಿರತಕ್ಕಂತಹ ವಿಚಾರ ಮತ್ತು ಬಿ.ಜೆ.ಪಿ ವರ್ಕರ್ಸ್ ಮೇಲೆ ಇವರು ನಡೆಸತಕ್ಕಂತಹ ಹಲ್ಲೆ, ಖೂನಿ ಕೇಸ್‌ಗಳು, ಇದರ ಬಗ್ಗೆ ಒಂದು ಜ್ಯುಡಿಷಿಯಲ್ ಎನ್‌ಕ್ವೈರಿ ಆದರೂ ತಪ್ಪಿಲ್ಲ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ಸರ್ಕಾರ ಮತ್ತು ಪೋಲೀಸ್‌ನವರು ಫೇಲಾದಾಗ ನಾವು ಏನು ಮಾಡಬೇಕು, ಕ್ರಿಮಿನಲ್ ಪ್ರೊಸೀಜರ್ ಕೋಡ್, ಐ.ಪಿ.ಸಿ. ಕೋಡ್, ಮತ್ತು ಇಂಡಿಯನ್ ಎವಿಡೆನ್ಸ್ ಆಕ್ಟ್ ಫೇಲಾದಾಗ ನಾವು ಏನು ಮಾಡಬೇಕು ಎನ್ನತಕ್ಕಂಥದ್ದು ನಮಗೆ ಗೊತ್ತಾಗುತ್ತಿಲ್ಲ. ಅದಕ್ಕೋಸ್ಕರವಾಗಿ ನಾನು ಬಹಳ ಪ್ರಬಲವಾಗಿ ನಿಮ್ಮಲ್ಲಿ ವಾದಿಸುತ್ತಿದ್ದೇನೆ. ದಯವಿಟ್ಟು ಹ್ಯೂಮನ್ ರೈಟ್ಸ್ ಕಮಿಷನ್‌ನ್ನು ತಾವು ತಕ್ಷಣ ಅಪಾಯಿಂಟ್ ಮಾಡಬೇಕು, ಎಷ್ಟು ಸಾರಿ ತಾವು ಹೇಳಿದ್ದೀರಿ, ರೆಕಾರ್ಡ್ಸ್ ತೆಗೆಯಿರಿ, ಸನ್ಮಾನ್ಯ ಶ್ರೀ ಸಿದ್ಧರವರು ನನ್ನ ಎದುರಿಗೆ ಕುಳಿತಿದ್ದಾರೆ, 15 ದಿವಸದಲ್ಲಿ ಹ್ಯೂಮನ್ ರೈಟ್ ಕಮಿಷನ್ ಮಾಡುತ್ತೇವೆ ಎಂದು ಹೇಳಿದರು, ಏಕೆ ಆ ಹ್ಯೂಮನ್ ರೈಟ್ಸ್ ಕಮಿಷನ್ ಮಾಡಲಿಲ್ಲ? ಅವರಿಗೆ ಗೊತ್ತಿದೆ, ನನ್ನ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಎಷ್ಟು ಖೂನಿಗಳು ಆಗಿವೆ ಎಂದು, ಏಕೆಂದರೆ ಅವರು

ಹೋಮ್ ಮಿನಿಸ್ಟರ್ ಆಗಿದ್ದಾಗ ಅವರಿಗೆ ಹೇಳಿದ್ದೇನೆ, ಪತ್ರಿಕೆಗಳಿಗೂ ಕೊಟ್ಟಿದ್ದೇನೆ, ಇವತ್ತು ಫೋಟೋಗಳನ್ನು ಕೂಡ ಕೊಟ್ಟಿದ್ದೇನೆ, ಹೊಸಕೋಟೆ ಒಂದು ಕಡೆ, ಆನೇಕಲ್ ಒಂದು ಕಡೆ, ಬೆಂಗಳೂರು ನಾರ್ಥ್ ಒಂದು ಕಡೆ, ಇದು ಯಾರಿಗೂ ಕೂಡ ಶೋಭೆ ತರತಕ್ಕಂತಹ ವಿಚಾರ ಅಲ್ಲ, ಧೈರ್ಯವಾಗಿ ಹೇಳಿ, ಬಿ.ಜೆ.ಪಿ. ಬೆಳೆಯಬಾರದು ನಾವು ತೀರ್ಮಾನ ಮಾಡಿದ್ದೇವೆ, ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇವೆ, ಪೋಲಿಸ್‌ನವರು ನಮ್ಮನ್ನು ಹೊಡೆದು ಬಿಸಾಕುತ್ತಾರೆಂದು ಹೇಳಿ ಬಿಡಿ. We will take law into hands. We will also maintain records..... ಇದು ತಾತ್ಕಾಲಿಕ ನೀವು ಬಂದಿದ್ದೀರಿ, ಇವತ್ತು ಇರುತ್ತೀರಿ, ಹೋಗುತ್ತೀರಿ, ಮತ್ತೊಂದು ಪಕ್ಷ ಬರುತ್ತದೆ, ಹೋಗುತ್ತದೆ. ಆದರೆ ಕಾನೂನು ಬಹಳ ಮುಖ್ಯ. ನಮ್ಮ ಸಂರಕ್ಷಣೆ ಬಹಳ ಮುಖ್ಯ ನಾವು ಅಬಲರಿಗೆ ಯಾವತ್ತೂ ಸಹಾಯ ಮಾಡಬೇಕೇ ಹೊರತು, ಅವರನ್ನು ಎಕ್ಸ್‌ಪ್ಲಾಯ್ಟ್ ಮಾಡುವುದು, ಅವರಿಗೆ ಕೊಲೆ ಮಾಡುವುದು, ಅವರಿಗೆ ಹಿಂಸೆ ಕೊಡುವುದು ಸರಿಯಲ್ಲ, ಇದು ಅತಿ ಜಾಸ್ತಿಯಾಗಿದೆ. ನಾನು ಮನ ನೊಂದು ಹೇಳುತ್ತಿದ್ದೇನೆ, ತಾವು ಕೂಡಲೇ ಗಮನ ಹರಿಸಬೇಕು. ಇದರ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕು. ಹೊನ್ನೇಗೌಡ ದೆಹಲಿಗೆ ಏಕೆ ಓಡಿ ಹೋದ, ಮಹಮ್ಮದ್ ಎನ್ನುವವರನ್ನು ಕರೆದುಕೊಂಡು ಏಕೆ ಹೋದ ಅದು ನಾನು ಹೇಳುತ್ತಿಲ್ಲ, statement before 100 people... ದೆಹಲಿಗೆ ಹೋಗಿ ಅವರನ್ನು ಅರೆಸ್ಟ್ ಮಾಡುವುದಕ್ಕಾಗುವುದಿಲ್ಲ, ಆಗುತ್ತದೆಯೇ? ಏಕೆ ಆಗುವುದಿಲ್ಲ? ಯಾರು ರಕ್ಷಣೆ ಕೊಡುತ್ತಿದ್ದಾರೆ? ಪಾರ್ಟಿ ಅದಕ್ಕೇ ಇರುವುದು? ತಾವು ಹೆದರಿಸಿ ಪಾರ್ಟಿ ಕಟ್ಟುತ್ತೀರೋ, ಹೆದರಿಸಿ ಪಾರ್ಟಿ ಕಟ್ಟುವುದಕ್ಕೆ ಆಗುತ್ತದೆಯೇ, ಅದಕ್ಕೋಸ್ಕರ ನಾನು ಹೇಳುತ್ತೇನೆ, ತಕ್ಷಣ ಪೋಲೀಸ್‌ನವರ ಬಗ್ಗೆ ತಾವು ಎಚ್ಚರ ವಹಿಸಬೇಕು. ನನ್ನ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ. I will tell you on the very face of them. How partial they, how innocent they are how ignorant about these laws....

ಅವರ ಎದುರಿಗೆ ಹೇಳುವುದಕ್ಕೆ ತಯಾರಾಗಿದ್ದೇನೆ. ಇದು ಏನಾಗಿದೆ ಎಂದರೆ ಪಾರ್ಲಿಮೆಂಟಿನಲ್ಲಿ ಮೆಂಬರ್ ಇದ್ದಾರೆ, ಈ ಕಡೆ ಸರ್ಕಾರ ಇದೆ, ಪ್ರಧಾನ ಮಂತ್ರಿಗಳಿದ್ದಾರೆ, ಇಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ನಮ್ಮದೇ ಬಹುಮತ, ನಗರ ಸಭೆಗಳಲ್ಲಿ ನಮ್ಮದೇ ಬಹುಮತ, ಗ್ರಾಮ ಸಭೆಗಳಲ್ಲಿ ನಮ್ಮದೇ ಬಹುಮತ, ನಾವು ಹೇಳಿದ ಹಾಗೆ ಕೇಳಬೇಕು, ಎನ್ನತಕ್ಕಂತಹ ಸರ್ವಾಧಿಕಾರ ಮನೋಭಾವ ಏನು ಇದೆ ಅದನ್ನು ಸರ್ಕಾರ ಬಿಡದೆ ಹೋದರೆ, ಪರಿಸ್ಥಿತಿ ಹದಗೆಡುತ್ತದೆ. ಖಂಡಿತವಾಗಿ ನಮ್ಮ ರಾಜ್ಯ ಬಿಹಾರವನ್ನು ಮೀರಿಸುತ್ತದೆ ಎಂದು ಹೇಳುತ್ತೇನೆ. ದಯವಿಟ್ಟು ತಾವು ಅರ್ಥ ಮಾಡಿಕೊಳ್ಳಿ, ಒಂದು ತಾಲ್ಲೂಕಿನಲ್ಲಿ 25 ಖೂನಿ ಬಿಹಾರದಲ್ಲಿ ಆಗಿದೆಯೋ? ಇಂಡಿಯಾದ ಯಾವ ಭಾಗದಲ್ಲಾದರೂ ಆಗಿದೆ ಎಂದು ಹೇಳಿ ನೋಡೋಣ, ನೋಡು ನನ್ನ ರಾಜ್ಯ ಎಂದು ಹೇಳುತ್ತಾರೆ, ನೋಡು ನನ್ನ ರಾಜ್ಯದಲ್ಲಿ ಹೇಗೆ ನಡೆಯುತ್ತಿದೆ ಎಂದು ಹೇಳುತ್ತಾರೆ, ನಾನು ಹೇಳುತ್ತೇನೆ, ನೋಡಿ ನೀವು ಲಾ ಅಂಡ್ ಆರ್ಡರ್ ಅಂತ ಪ್ರಧಾನಮಂತ್ರಿಗಳು

ಇವತ್ತು..... you appoint a Commission, you appoint a judicial enquiry, the truth will come out..

ಶ್ರೀ ಕೆ.ಎನ್.ನಾಗೇಗೌಡ:- ಪಾಯಿಂಟ್ ಆಫ್ ಆರ್ಡರ್, ಪ್ರೈಮಿನಿಸ್ಟರ್ ರೆಫರನ್ಸ್‌ಗೆ ತೆಗೆದುಕೊಂಡು ಇಲ್ಲಿ ಮಾತನಾಡತಕ್ಕಂಥದ್ದು ಸರಿಯಲ್ಲ. ಪದೇ ಪದೇ ಮಾತಿಗೆ ಮುಂಚೆ ರಾಷ್ಟ್ರದ ಪ್ರಧಾನಿಯವರನ್ನು ಮಾತಿಗೆ ಮುಂಚೆ just because a Karnataka Leader... ಎಂದು ಹೇಳಿ, ಅವರು ಅಲ್ಲಿ ಪ್ರೈಮಿನಿಸ್ಟರ್ ಆಗಿರುವುದಕ್ಕೂ ಇದಕ್ಕೂ ಏನು ಸಂಬಂಧ? in what way the Prime Minister is connected with this case? I wanted to know from you, in what way the Prime Minister is connected with this problem? You are a Senior Leader. You know better than us....

ಶ್ರೀ ವೈ.ರಾಮಕೃಷ್ಣ:- ಕರ್ನಾಟಕಕ್ಕೂ ಪ್ರೈಮಿನಿಸ್ಟರ್ ತಾನೆ ರೆಕಾರ್ಡ್ ತೆಗೆಸಿ ನೋಡಿ,

ಶ್ರೀ ವೈ.ರಾಮಕೃಷ್ಣ:- ಇಂದಿರಾಗಾಂಧಿಯವರು ಇದ್ದಾಗ ಅವರ ವಿಚಾರ ಮಾತನಾಡಲಿಲ್ಲವೇ? ಅವರ ವಿಚಾರ ಎಕ್ಸ್‌ಪಂಚ್ ಮಾಡಿದ್ದೇವೆಯೇ? 20 ಜನರ ಕೊಲೆಯಾಗಿದೆ.

(ಗೊಂದಲ)

ಉಪ ಸಭಾಧ್ಯಕ್ಷರು:- ಕೊಲೆ ಮಾತು ತಾವು ಹೇಳಿ, ಪದೇ ಪದೇ ಪ್ರಧಾನಮಂತ್ರಿಗಳ ಹೆಸರು ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ವೈ.ರಾಮಕೃಷ್ಣ:- ಇವೊತ್ತು ಏನಾಗಿದೆ ಎಂದರೆ ಬಿಹಾರ್ ಜನತಾ ದಳದ ಅಧ್ಯಕ್ಷರಾಗಿರುವಂಥವರು ಇಪ್ಪತ್ತು ಜನರ ಕೊಲೆ ಮಾಡಿದ್ದಾರೆ.

ಉಪಾಧ್ಯಕ್ಷರು:- ಕೊಲೆ ಮಾಡಿರುವುದನ್ನು ತಾವು ಹೇಳಿ ಆದರೆ ಪದೇ ಪದೇ ಪ್ರಧಾನಿಯವರ ಹೆಸರನ್ನು ಹೇಳಬೇಡಿ.

ಶ್ರೀ ಆರ್.ವಿ.ದೇಶಪಾಂಡೆ:- ಬಿಹಾರ್‌ನಲ್ಲಿ ಏನಾಗಿದೆ ಎಂದು ಇಲ್ಲಿ ಚರ್ಚೆ ಮಾಡುವುದು ಅವಶ್ಯಕತೆ ಇಲ್ಲ. I am not coming in the way.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ:- ಒಂದು ನಿಮಿಷ ಅಧ್ಯಕ್ಷರೇ,.....

ಉಪಾಧ್ಯಕ್ಷರು:- ದೇಶಪಾಂಡೆಯವರು ಮಾತನಾಡುತ್ತಾರೆ ಒಂದು ನಿಮಿಷ ಕೇಳಿ.

ಶ್ರೀ ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ವೈ.ರಾಮಕೃಷ್ಣರವರು

ಮಾತನಾಡುವಂಥ ಕಾಲದಲ್ಲಿ ನಮ್ಮ ಒಬ್ಬ ಕನ್ನಡಿಗರು ಈ ದೇಶದ ಪ್ರಧಾನಿಯಾಗಿರುವಂಥ ಕಾಲದಲ್ಲಿ ಅವರಿಗೆ ಕಳಂಕ ತರುವಂಥ ರೀತಿಯಲ್ಲಿ ನಿಮ್ಮ ಸರ್ಕಾರ ಕೆಲಸ ಮಾಡುತ್ತಿದೆ ನಮಗೆ ಇದೊಂದು ಅಪಚಾರ, ಆದಕಾರಣ ಅವರಿಗೆ ಗೌರವ ತರುವಂಥ ರೀತಿಯಲ್ಲಿ ಕೆಲಸ ಮಾಡಿ....

ಉಪಾಧ್ಯಕ್ಷರು:- ಇಲ್ಲ, ಇಲ್ಲ, ಇಲ್ಲ,

(ಗೊಂದಲ)

ಶ್ರೀ ವೈ.ರಾಮಕೃಷ್ಣ:- ಇನ್ನೇನು ದೇವೇಗೌಡರೇ ಮಾಡಿಸುತ್ತಿದ್ದಾರೆಂದು ಹೇಳಿದ್ದೇನೋ? I am not accusing anybody.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರಲ್ಲಾ ಆ ಪ್ರಕಾರ ರೆಕಾರ್ಡು ಇಲ್ಲ. ಈಗ ಬಿಹಾರ್‌ನಲ್ಲಿ ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ಇಲ್ಲೇನು ಚರ್ಚೆ ಅವಶ್ಯಕತೆ ಇದೆ? ಬಿಹಾರ್ ಮುಖ್ಯಮಂತ್ರಿ ಮಾಡುತ್ತಿದ್ದಾರೆಂದರೆ, ಪಾರ್ಟಿ ಅಧ್ಯಕ್ಷರು ಮಾಡುತ್ತಿದ್ದಾರೆಂದರೆ, ಅವರೇನು ಈ ಸದನದ ಸದಸ್ಯರೇ? ಆದಕಾರಣ ನಾನು ತಮಗೆ ರಿಕ್ವೆಸ್ಟ್ ಮಾಡುತ್ತೇನೆ ಅದನ್ನು ರೆಕಾರ್ಡ್‌ನಿಂದ ತೆಗೆದು ಹಾಕಿ. It should be expunged from the records. ಸೆಕೆಂಡಲೀ, ಪ್ರಧಾನಮಂತ್ರಿಗಳು ಇನ್‌ವಾಲ್ವ ಇದ್ದಾರೆ, ಪ್ರಧಾನಮಂತ್ರಿಗಳನ್ನು ಪದೇ ಪದೇ ಇಲ್ಲಿ ಇನ್‌ವಾಲ್ವ ಮಾಡುವ ಅವಶ್ಯಕತೆ ಏನಿದೆ?

ಉಪಾಧ್ಯಕ್ಷರು:- ಈಗ ಇಲ್ಲಿ ಅದರ ಬಗ್ಗೆ ಚರ್ಚೆ ಬೇಡ.

ಶ್ರೀ ವೈ.ರಾಮಕೃಷ್ಣ:- ನಾನು ಉದಾಹರಣೆ ಕೊಟ್ಟಿನೇ ಹೊರತು, ದೇವೇಗೌಡರ ಹೆಸರನ್ನು ಇಲ್ಲಿ ತರಲಿಲ್ಲ, ಆ ರೀತಿ ಯಾರಾದರೂ ಹುಚ್ಚರು ಹೇಳಬೇಕು Am I a sane man Am I a sane politician, I am a senior Member; I know what to speak and how to speak. ದಯವಿಟ್ಟು ಇದನ್ನು ಅರ್ಥ ಮಾಡಿಕೊಳ್ಳಿ. ಈಗ ನಾನು ಹೇಳುವುದೇನೆಂದರೆ ಈ ಎರಡು ತಾಲ್ಲೂಕಿನಲ್ಲಿ ಸುಮಾರು ಐವತ್ತು ಖೂನಿಯಾಗಿದೆ.

SRI R.ROSHAN BAIGH:- He is a senior member of theis House. And I have got highest regard for him. ಶೂನ್ಯ ವೇಳೆಯಲ್ಲಿ ಈ ಪ್ರಶ್ನೆ ಎತ್ತಿದ್ದಾರೆ. ಅವರು ಏನು ರೈಸ್ ಮಾಡಿದ್ದಾರೆ ಅದರ ಬಗ್ಗೆ ಕನ್‌ಫೈನ್ಡ್ ಮಾಡಲಿ, ಬೇರೆ ವಿಷಯ ಮಾತನಾಡಬೇಕಾದರೆ ಪೋಲೀಸ್ ಇಲಾಖೆ ಮೇಲೆ ಡಿಮ್ಯಾಂಡ್ ಬರುತ್ತಿದೆ ಆಗ ಮಾತನಾಡಲಿ, ಈಗ ಪ್ರಶ್ನೆ ಏನು ಎತ್ತಿದ್ದಾರೆ let him confine to that.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸಾಮಾನ್ಯವಾಗಿ ಏನಾಗುತ್ತದೆ ಎಂದರೆ,

ಅವರೊಂದು ಹೆಸರನ್ನು ತೆಗೆದುಕೊಂಡಿದ್ದಾರೆ ಈಗ ಒಂದೊಂದಕ್ಕೆ ಒಂದು ಹೆಸರು ಇದೆ, ಈಗ ಅವರು ಬಿಹಾರ್ ಕಲ್ಚರ್ ಎಂದು ಆ ರೀತಿಯಲ್ಲಿ ಹೇಳಿದರು, ಅದನ್ನು ಹೇಳಿದ ಕೂಡಲೇ ನೀವೇಕೆ ತಿಳಿದುಕೊಳ್ಳುತ್ತೀರಿ ನಾವು ಅದರಲ್ಲಿ ಇನ್‌ವಾಲ್ವ ಇದ್ದೇವೆ ಎಂದು.... ಅದನ್ನೆಲ್ಲಾ ಮಾತನಾಡುವಾಗ ಹೇಳುತ್ತಾರೆ.

(ಗೊಂದಲ)

ಉಪಾಧ್ಯಕ್ಷರು:- ಪದೇ ಪದೇ ಪ್ರಧಾನಮಂತ್ರಿಗಳ ಹೆಸರನ್ನು ಇಲ್ಲಿ ತೆಗೆಯುವುದು ಸರಿಯಲ್ಲ.

ಶ್ರೀ ಆರ್.ವಿ.ದೇಶಪಾಂಡೆ:- ತಮ್ಮ ಮತಕ್ಷೇತ್ರದಲ್ಲಿ ತೊಂದರೆ ಇದೆ, ಅದನ್ನು ತಾವು ರೈಸ್ ಮಾಡಿ, ಆದರೆ ತಮಗೆ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ಆನೇಕಲ್‌ನಲ್ಲಿ ಹೊಸಕೋಟೆಯಲ್ಲಿ ಮರ್ಡರ್ಸ್ ಆಗುತ್ತಿವೆ ಎಂದು ಹೇಳಿದಿರಿ ಹೇಳಿ. ಆದರೆ ಬೀ ಸ್ಪೆಸಿಫಿಕ್. ಮರ್ಡರ್ ಆಗುತ್ತಿವೆ ಎಂದರೇನು? ಯಾವ ಸಮಯದಲ್ಲಿ ಯಾವ ಕ್ರಮ ಸರ್ಕಾರ ಕೈಗೊಳ್ಳಬೇಕು ಅದನ್ನು ಕೈಗೊಳ್ಳುತ್ತೇವೆ. ಆಗುವುದಿಲ್ಲವೆಂದೇನಿಲ್ಲ, ಆದರೆ ಯಾರದು ಆಯಿತು? ಏನಾಯಿತು ಎಂದು ಸ್ಪೆಸಿಫಿಕ್ಕಾಗಿ ಹೇಳಿ. Let it be specific, the Government will reply properly.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ದೇಶಪಾಂಡೆಯವರು ಹೇಳುವುದರಲ್ಲಿ ಸರಿ ಇದೆ. ಅದರ ಹಿನ್ನೆಲೆ ಏನು, ಯಾವ ಪರಿಸ್ಥಿತಿಯಲ್ಲಿ ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರಿಗೆ ರಾಜ್ಯಾದ್ಯಂತ ಆಗುತ್ತಿದೆ ಎಂದು ಕೆಲವು ಉದಾಹರಣೆಗಳನ್ನು ಕೊಡುತ್ತಾ, ಸ್ಪೆಸಿಫಿಕ್ ಆಗಿ ಕೇಸನ್ನು ಅವರು ಎಕ್ಸ್‌ಪ್ಲೇನ್ ಮಾಡುತ್ತಿದ್ದಾರೆ, ಅವರು ಏನು ಹೇಳುತ್ತಿದ್ದಾರೆಂದರೆ ಬೆಂಗಳೂರು ಉತ್ತರ ತಾಲ್ಲೂಕಿನ ಯಲಹಂಕ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ಅರಕೆರೆ ಗ್ರಾಮದಲ್ಲಿ ಬಿಜೆಪಿ ಕಾರ್ಯಕರ್ತರಾದ ಚಿಕ್ಕಣ್ಣಪ್ಪ ಮತ್ತು ವೆಂಕಟಾಚಲಪ್ಪ ಅವರನ್ನು ಜನತಾ ದಳದ ಮುಖಂಡರಾದ ಹೊನ್ನೇಗೌಡರು ಅವರ ಅಣ್ಣಂದಿರಾದ ನರಸಿಂಹಯ್ಯ ಇವರು ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷರು, ಅವರು ಹಾಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹೆಚ್.ಚಿನ್ನೇಗೌಡ, ದೊಡ್ಡ ಲಕ್ಕಪ್ಪ, ನರಸಿಂಹಮೂರ್ತಿಯವರ ಮಕ್ಕಳಾದ ಮೂರ್ತಿ ನಾಗರಾಜಗೌಡ ಮರೀಗೌಡ ಚನ್ನೇಗೌಡರ ಮಕ್ಕಳಾದ ಸಿ.ಎಲ್.ಗೌಡ ಮರಿಗೌಡ ಮುಂತಾದವರು ಮಚ್ಚು, ದೊಣ್ಣೆ, ಕಬ್ಬಿಣ ರಾಡ್‌ಗಳನ್ನು ತೆಗೆದುಕೊಂಡು ಬಂದು, ಬಂದೂಕುಗಳನ್ನು ತೆಗೆದುಕೊಂಡು ಬಂದು, ಮಾರಕಾಸ್ತ್ರಗಳಿಂದ ಕೊಲೆ ಮಾಡಿದ್ದಾರೆ. ಇದು ಮೊದಲನೆಯದು, ಎರಡನೆಯದು ಇಪ್ಪತ್ತು ದಿವಸಗಳ ಹಿಂದೆ ಈ ಬಿಜೆಪಿ ಕಾರ್ಯಕರ್ತರಾದಂಥ ರಂಗಪ್ಪನವರು ಐವರಖಿಂಡಪೂರದ ಬಳಿ ಜನತಾ ದಳದ ಮುಖಂಡರಾದ ಮೂರ್ತಿ ಮತ್ತು ಕೆಲವು ಬಾಡಿಗೆ ಗೂಂಡಾಗಳು ಒಂದೇ ಕಾರಿನಲ್ಲಿ ಅಟ್ಟಿಸಿಕೊಂಡು ಹೋದಾಗ,

ಐವರ ಖಂಡಪೂರದ ಬಿಜೆಪಿ ಕಾರ್ಯಕರ್ತರ ಮನೆಯಲ್ಲಿ ರಂಗಪ್ಪನವರು ಅವಿತುಕೊಂಡು ಬದುಕಿದ್ದಾರೆ, ಕಂಪ್ಲೇಂಟ್ ಕೊಟ್ಟಿದ್ದಾರೆ. ಇದು ಇಪ್ಪತ್ತೈದು ದಿವಸದ ಹಿಂದೆ ನಡೆದಂಥ ಘಟನೆ. ಇವೊತ್ತು ಅವನ ಕೊಲೆಯಾಗಿದೆ. ನಾನೇನು ಹೇಳುವುದಕ್ಕೆ ಹೊರಟಿದ್ದೇನೆ, ಎಂದರೆ ಕಾರಣ ಏನೇ ಇರಬಹುದು ಇವೊತ್ತು ನಮಗೇನು ಬಂದಿದೆ ಎಂದರೆ ಆ ಸ್ಥಳಕ್ಕೆ ವೈ.ರಾಮಕೃಷ್ಣರವರು, ಈಶ್ವರಪ್ಪನವರು ಹೋದಾಗ ಇವೊತ್ತು ನಮ್ಮ ಪಕ್ಷ ಬೆಳೆದಿದೆ ಅದನ್ನು ತಡೆಯುವುದಕ್ಕೆ ನಾವ್ಯಾರು, ನೂರಾರು ಜನ ನಮ್ಮ ಕಾರ್ಯಕರ್ತರು ಬಂದು ಹೇಳಿದ್ದಾರೆ ಏನೆಂದರೆ ಅಲ್ಲಿಯ ಜನತಾ ದಳದ ಪ್ರಮುಖರು ಅಲ್ಲಿ ಬೇರೆ ಯಾವುದೇ ರಾಜಕೀಯ ಪಕ್ಷದ ಚಟುವಟಿಕೆ ಆಗಬಾರದು ಎನ್ನುವ ಹಿನ್ನೆಲೆಯಲ್ಲಿ ಪ್ರಮುಖರಾಗಿರುವಂಥ ಬಿಜೆಪಿಯ ಕಾರ್ಯಕರ್ತರನ್ನು ಮೂರು ಜನರ ಕೊಲೆಯಾಯಿತು. ನಾಲ್ಕನೆಯವರು ಸೀರಿಯಸ್ ಕಂಡೀಷನ್‌ನಲ್ಲಿದ್ದಾರೆ. ಇದೇ ವ್ಯಕ್ತಿಯ ಬಗ್ಗೆ ಈ ತರಹ ಕಾರಣವನ್ನಿಟ್ಟುಕೊಂಡು ಹೋದಾಗ, ಅವರು ಒಂದು ಮನೆಯಲ್ಲಿ ಅವಿತುಕೊಂಡು ಕಾಪಾಡಿಕೊಂಡು ಕಂಪ್ಲೇಂಟ್ ಕೊಟ್ಟರೂ, ಅದರ ಕಡೆಗೆ ಗಮನಕೊಡಲಿಲ್ಲ, ಅವರು ಹೇಳುವಂಥದ್ದು, ಇಲ್ಲಿ ಯಾವುದೇ ಬೇರೆ ಪಕ್ಷದವರು ಇರುವುದಕ್ಕೆ ಬಿಡೋದಿಲ್ಲ ಎಂದು, ಈ ರೀತಿ ಒಂದು ಪರಿಸ್ಥಿತಿ ಬಂದಿದೆ, ಆ ಹಿನ್ನೆಲೆಯಲ್ಲಿ ಹತ್ತಾರು ಉದಾಹರಣೆಗಳನ್ನು ನಾವು ಕೊಟ್ಟಿದ್ದೇವೆ, ಇದೊಂದು ಸ್ಪೆಸಿಫಿಕ್ ಕೇಸ್, ಅವನು ಬಿಜೆಪಿ ಕಾರ್ಯಕರ್ತ ಹೌದೋ ಅಲ್ಲವೋ? ಈ ಹಿನ್ನಲೆಯಲ್ಲಿ ಗೂಂಡಾಗಿರಿ ಮಾಡಿ, ಹಾಡು ಹಗಲಿನಲ್ಲಿ ಕೊಲೆ ಮಾಡುವಂಥ ಒಂದು ಪರಿಸ್ಥಿತಿ ಅಲ್ಲಿ ಬಂದಾಗ ಬಿಹಾರನ್ನು ಮೀರಿಸುವಂಥ ಸ್ಥಿತಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಬಂದಿದೆ ಅದಕ್ಕೆ ನಿಮ್ಮ ಪೋಲೀಸ್ ಅಧಿಕಾರಿಗಳು ಬೆಂಬಲವಾಗಿರುವಂಥ ಒಂದು ಪರಿಸ್ಥಿತಿ ಬಂದಿರುವುದರಿಂದ ಇದನ್ನು ಜ್ಯುಡಿಶಿಯಲ್ ಎನ್‌ಕ್ವಾಯರಿ ಮಾಡಿ.... ಬಿಹಾರ್‌ನಲ್ಲಿದ್ದಂಥ ಪರಿಸ್ಥಿತಿಯನ್ನು ಇಲ್ಲೂ ಮುಂದುವರಿಸುತ್ತೇವೆಂದರೆ ನನ್ನದೇನೂ ಅಭ್ಯಂತರವಿಲ್ಲ.....

ಶ್ರೀ ಸಿ.ಭೈರೇಗೌಡ:- ಮಾನ್ಯ ಯಡಿಯೂರಪ್ಪನವರು ಏನು ಹೇಳಿದ್ದಾರೆ ಅಷ್ಟನ್ನು ಬಿಟ್ಟು ಇನ್ನು ಉಳಿದದ್ದು ಏನಾದರೂ ಇದ್ದರೆ ಅದನ್ನು ಕಡತದಿಂದ ತೆಗೆದು ಹಾಕಿ.

ಉಪಾಧ್ಯಕ್ಷರು:- ಆ ತರಹ ಇದ್ದರೆ, ಅದನ್ನು ಕಡತದಿಂದ ತೆಗೆದು ಹಾಕೋಣ.

(ಗೊಂದಲ)

ಶ್ರೀ ವೈ.ರಾಮಕೃಷ್ಣ:- ಕೋಲಾರ ಜಿಲ್ಲೆಯಲ್ಲೂ ಇದೇ ಪರಿಸ್ಥಿತಿ ಇದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಸಭಾಧ್ಯಕ್ಷರೇ, ಈ ಸದನದಲ್ಲಿ ಬಹಳ ಹಿರಿಯ ಸದಸ್ಯರು, ಸುಮಾರು ಇಪ್ಪತ್ತು ಮೂವತ್ತು ವರ್ಷಗಳ ಕೆಲಸ ಮಾಡಿ ಅನುಭವ ಇರತಕ್ಕಂಥ ಸದಸ್ಯರೂ ಇದ್ದಾರೆ. ವೀರಪ್ಪ ಮೊಯಿಲಿಯವರು, ಮಾಜಿ ಮುಖ್ಯಮಂತ್ರಿಗಳು, ಧರ್ಮಸಿಂಗ್‌ರವರು, ಖರ್ಗೆಯವರು, ತಿಮ್ಮಪ್ಪನವರು,

ಯಡಿಯೂರಪ್ಪನವರು ನಾವು ವಿರೋಧ ಪಕ್ಷದಲ್ಲಿ ಒಟ್ಟಿಗೆ ಕೆಲಸ ಮಾಡಿದ್ದೇವೆ. ಕಳೆದ ನಾಲ್ಕೈದು ವರ್ಷಗಳಲ್ಲಿ, ಎರಡು ವರ್ಷಗಳ ಹಿಂದೆ ನಾವು ವಿರೋಧ ಪಕ್ಷದಲ್ಲಿದ್ದು ಜೊತೆಯಲ್ಲಿ ಕೆಲಸಸ ಮಾಡಿದ್ದೇವೆ. ಶೂನ್ಯವೇಳೆಯ ಸಂದರ್ಭದಲ್ಲಿ ನಾವು ಕೆಲವು ಮುಖ್ಯ ವಿಷಯಗಳನ್ನು ರೈಸ್ ಮಾಡುತ್ತೇವೆ. ಹೀಗೆ ಇದೆ ಎಂದು. ಆಗ ಅಧ್ಯಕ್ಷರಾಗಿರತಕ್ಕಂಥವರು ಆಡಳಿತ ಪಕ್ಷದವರಿಗೆ ಸೂಚನೆ ಕೊಡುತ್ತೀರಿ, ನೋಡಿ ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಿ ಎಂದು. ಅಧ್ಯಕ್ಷರ ಸ್ಥಾನದಿಂದ ನೀವು ಕೊಡುವಂಥ ತೀರ್ಪಿನ ಬಗ್ಗೆ ನಮಗೆಲ್ಲಾ ಅಪಾರವಾದ ಗೌರವ, ಶ್ರದ್ಧೆ ಇದೆ. ತಾವು ಹೇಳಿದ್ದುದು ಎಲ್ಲವನ್ನೂ ನಾವು ಪರಿಪಾಲಿಸುತ್ತೇವೆ. ಆದರೆ ಇಲ್ಲಿ ತೊಂದರೆ ಏನು ಇದೆ ಎಂದರೆ ಗೌರವಾನ್ವಿತ ಸದಸ್ಯರಾದ ವೈ.ರಾಮಕೃಷ್ಣರವರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಸತ್ಯ ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಅದಕ್ಕೆ ಸಂಬಂಧಪಟ್ಟ ಮಂತ್ರಿ ನಾನಲ್ಲ ವಿಷಯಗಳು ನನಗೆ ಗೊತ್ತಿಲ್ಲ. ಮಾನ್ಯ ರೋಷನ್ ಬೇಗ್‌ರವರು ಸಂಬಂಧಪಟ್ಟ ಮಂತ್ರಿಗಳಿರುತ್ತಾರೆ. ಈಗ ಅವರು ಏನು ಹೇಳುತ್ತಿದ್ದಾರೆಂದರೆ ಬಿಜೆಪಿಯ ಕಾರ್ಯಕರ್ತರನ್ನು ಸದೆಬಡಿಯುತ್ತಿದ್ದಾರೆ, ಒಂದನೇ ಆಪಾದನೆ, ಬಿಜೆಪಿಯನ್ನು ನೀವು ಬೆಳೆಯಲು ಬಿಡುತ್ತಿಲ್ಲ ಇದು ಎರಡನೆಯ ಆಪಾದನೆ, ದಲಿತರ ಬಗ್ಗೆ ಸರ್ಕಾರ ವಿರೋಧಿ ಧೋರಣೆಯನ್ನು ತಾಳಿದೆ, ಮೂರನೆಯ ಆಪಾದನೆ, ನಾಲ್ಕನೆಯ ಆಪಾದನೆ ಬಿಹಾರದ ಸರ್ಕಾರವನ್ನು ಮೀರಿ, ನಿಮ್ಮ ಸರ್ಕಾರ ನಡೆಯುತ್ತಿದೆ. ಅದನ್ನೂ ಸಹಿತ ಇಲ್ಲಿ ಮೀರಿಸುತ್ತಿದ್ದೀರಿ ಎಂದು ಹೇಳಿದ್ದಾರೆ. ನಾವೂ ಸಹಿತ ಇದಕ್ಕೆ ರಾಜಕೀಯವಾಗಿ ಉತ್ತರವನ್ನು ಕೊಡುವಂಥ ಶಕ್ತಿ ಇದೆ. ಇಲ್ಲವೆಂದೇನಿಲ್ಲ. ಇವರು ಆಡಳಿತ ನಡೆಸತಕ್ಕಂಥ ರಾಜ್ಯದಲ್ಲಿ, ಮತ್ತೊಂದು ನಾವು ಹೇಳಬಹುದು. ಮಾನ್ಯ ಖರ್ಗೆಯವರು ಸಂಸ್ಕೃತಿಯ ಬಗ್ಗೆ ಮಾತನಾಡಿದರು. ಬಿಹಾರದ ಸಂಸ್ಕೃತಿ ಒಂದು, ಕರ್ನಾಟಕದ ಸಂಸ್ಕೃತಿ ಒಂದು, ಒಂದೊಂದು ಪಕ್ಷದ ಒಂದೊಂದು ಸಂಸ್ಕೃತಿ ಇದೆ ಎಂದು ಹೇಳಿದರು. ಆದರೆ ಏನಾಗುತ್ತಿದೆ ಮಾನ್ಯ ಅಧ್ಯಕ್ಷರೇ, ಇವೊತ್ತು ನಾವು ಆಡಳಿತ ಪಕ್ಷದಲ್ಲಿದ್ದೇವೆ, ನಿನ್ನೆ ಅವರಿದ್ದರು, ನಾಳೆ ನೀವು ಬರಬಹುದು, ಅವರು ಹೇಳತಕ್ಕಂಥ ವಿಚಾರಗಳು ಸ್ಕ್ಯಾಂಡಲ್ಲಾಗಿ ಹೋಗಿ ಮೀಡಿಯಾ ಮೂಲಕ ಹೊರಗಡೆ ಹೋಗುತ್ತವೆ. ಈ ಕಥೆ ಇರತಕ್ಕಂಥ ನಾವು ವಸ್ತು ಸ್ಥಿತಿ ಏನು? ಏಕೆ ಮರ್ಡರ್ ಆಯಿತು, ಮರ್ಡರ್ ಹಿನ್ನೆಲೆ ಏನು? ಇದನ್ನು ಹೇಳಲಿಕ್ಕೆ ಮಂತ್ರಿಗಳು ತಯಾರಾಗಿ ಬಂದಿರುತ್ತಾರೋ, ತಯಾರಾಗಿ ಬರಲು ಸಾಧ್ಯವಿಲ್ಲ, ನಾವು ನಾಳೆಯೋ, ನಾಡಿದ್ದೋ ಹೇಳಿಕೆಯನ್ನು ಕೊಡುತ್ತೇವೆ, ಆ ಹೇಳಿಕೆಗಳು ಪತ್ರಿಕೆಗಳಲ್ಲಿ ಆರನೆಯ ಪೇಜ್, ಏಳನೆಯ ಪೇಜ್‌ನಲ್ಲಿ ಪತ್ರಿಕೆಗಳಲ್ಲಿ ಬರುತ್ತದೆ. ಆದರೆ ನಾನು ಏನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ My submission to the Chair is, ಶೂನ್ಯ ವೇಳೆಯಲ್ಲಿ ಬಹಳ ಮಹತ್ವದ ವಿಚಾರ ಇದ್ದರೂ ಸಹಿತ ತಾವು ಸಭಾನಾಯಕರಿಗೆ, ಪಾರ್ಲಿಮೆಂಟ್ ಸಚಿವರಿಗೆ ಕರೆದು ಹೀಗೆ ವಿಷಯವನ್ನು ಪ್ರಸ್ತಾಪ ಮಾಡುವವರಿದ್ದಾರೆ, ನೀವು ತಯಾರಾಗಿ ಬರಬೇಕೆಂದು ಮಂತ್ರಿಗಳಿಗೆ ಸೂಚನೆ ಕೊಡಬೇಕು. ನಾವು ತಯಾರಾಗಿ ಬರಬಹುದು. ಸಮರ್ಪಕವಾಗಿ

ಉತ್ತರವನ್ನು ಕೊಡಬಹುದು. ಇದರ ಜೊತೆಗೆ ನಮಗೆ ಸಮಯವನ್ನೂ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಕಳೆದ ನಾಲ್ಕು ದಿವಸದಿಂದ ಈ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಪ್ರಯತ್ನಿಸುತ್ತಿದ್ದೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಅಧ್ಯಕ್ಷರೇ, ನೀವು ಟೈಮ್ ಫಿಕ್ಸ್ ಮಾಡಿ. ನಮಗೆ ಕೊನೆ ಪಕ್ಷ 2-3 ದಿವಸವಾದರೂ ಅವಕಾಶ ಬೇಕಾಗುತ್ತದೆ.

(ಗೊಂದಲ)

ಶ್ರೀ ವೈ.ರಾಮಕೃಷ್ಣ:- ಅಡ್ಜೆರ್ನ್‌ಮೆಂಟ್ ಮೋಶನ್‌ಗಾಗಿ ನಾವು ನೋಟೀಸ್ ಕೊಟ್ಟು ನಾಲ್ಕು ದಿವಸವಾಯಿತು. ಆಗ ಸ್ಪೀಕರ್ ಏನು ಹೇಳಿದರೆಂದರೆ ಅಡ್ಜೆರ್ನ್‌ಮೆಂಟ್ ಈಗ ಆಗೋದಿಲ್ಲ, ನಿಮಗೆ ಶೂನ್ಯ ವೇಳೆಯಲ್ಲಿ ಅವಕಾಶ ಕೊಡುತ್ತೇನೆಂದು ಹೇಳಿದಾಗ ನಾನು ಸ್ಪೀಕರ್‌ರವರ ಪರ್ಮಿಶನ್ ತೆಗೆದುಕೊಂಡು....

ಉದಾಧ್ಯಕ್ಷರು:- ಅವರು 15ನೇ ತಾರೀಖೇ ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಸಭಾಧ್ಯಕ್ಷರೇ, ನನ್ನ ಸಹೋದ್ಯೋಗಿಗಳು ಆದ ಸಿಂಧ್ಯಾರವರು ಎತ್ತಿದಂಥ ಪ್ರಶ್ನೆ ಇಷ್ಟೆ. ಶೂನ್ಯ ವೇಳೆಯಲ್ಲಿ ಎತ್ತಿರತಕ್ಕಂಥ ವಿಷಯಗಳೇನಿವೆ, ಅವರು ಅಷ್ಟಕ್ಕೆ ಮಾತ್ರ ಸೀಮಿತವಾಗಿರತಕ್ಕಂಥ ಉತ್ತರವನ್ನು ಪಡೆಯಬೇಕೇ ವಿನಹ ದೀರ್ಘವಾಗಿರತಕ್ಕಂಥ ವಿಚಾರಗಳನ್ನು ಪ್ರಸ್ತಾಪ ಮಾಡಿದರೆ ಸರಿ ಹೋಗುವುದಿಲ್ಲವೆಂದು ಮಾತ್ರ ಹೇಳಿದ್ದಾರೆಯೇ ವಿನಃ ಬೇರೆ ಅಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ, ಹಿಂದೆ ಗೃಹ ಸಚಿವರಾಗಿದ್ದಂಥ ಶ್ರೀಮಾನ್ ಸಿಂಧ್ಯಾರವರು ಮಾತನಾಡಿದಂಥ ಸಂದರ್ಭದಲ್ಲಿ ಇಂಥ ಶೂನ್ಯ ವೇಳೆಯಲ್ಲಿ ಬರತಕ್ಕಂಥ ವಿಚಾರಗಳನ್ನು ಸಂಬಂಧಪಟ್ಟ ಸಚಿವರಿಗೆ ಮತ್ತು ಸಂಸದೀಯ ಮಂತ್ರಿಗಳಿಗೆ ತಿಳಿಸಬೇಕೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಅದರ ಬಗ್ಗೆ ನನ್ನ ವಾದವೇನೂ ಇಲ್ಲ. ಈಗ ಶ್ರೀಮಾನ್ ವೈ.ರಾಮಕೃಷ್ಣರವರು ಈ ವಿಚಾರವನ್ನು ಎಷ್ಟು ದಿವಸಗಳಾದ ಮೇಲೆ ಎತ್ತಿದ್ದಾರೆಂದರೆ ಮೂರು ದಿವಸದಿಂದ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಪ್ರಯತ್ನ ಪಟ್ಟಿದ್ದಾರೆ. ಇದು ಬಹಳ ಗುರುತರವಾದಂಥ ವಿಚಾರ. ಈ ಕೊಲೆ ಆಗಿರತಕ್ಕಂಥದ್ದು ಬೆಂಗಳೂರು ಜಿಲ್ಲೆಯಲ್ಲಿ ಮತ್ತು ಕೋಲಾರದ ಕಡೆ ಮತ್ತು ಇನ್ನೂ ಕರ್ನಾಟಕದ ಹಲವಾರು ಕಡೆಗಳಲ್ಲಿ ಕೊಲೆಗಳು ನಡೆಯುತ್ತಿದೆ, ನಡೆಯುತ್ತಿಲ್ಲ ಎಂದು ಹೇಳುವ ಹಾಗಿಲ್ಲ. ಮೊದಲಿಗೂ ಮತ್ತು ಈಗಲೂ, ಜನತಾ ದಳದವರೇ ಕೊಲೆಗಳನ್ನು ಮಾಡಿಸುತ್ತಿದ್ದಾರೆ ಎಂದು ಹೇಳುವುದಕ್ಕಿಂತ ಧಾರಾಳವಾಗಿ ಕೊಲೆಗಳಂತೂ ಹಗಲೂ ರಾತ್ರಿ ಎಲ್ಲಾ ಕಡೆ ನಡೆಯುತ್ತಿದೆ. ಇದನ್ನು ತಡೆಯುವುದಕ್ಕೆ ಗೃಹ ಇಲಾಖೆ ಎಷ್ಟು

ತೀವ್ರವಾಗಿ ಪ್ರಯತ್ನವನ್ನು ಮಾಡುತ್ತಿದೆ ಎನ್ನುವುದರ ಬಗ್ಗೆ ನಮಗೆ ಬಹಳ ಸಂಶಯ ಬಂದಿದೆ. ಗೃಹ ಇಲಾಖೆ ಈ ವಿಚಾರದಲ್ಲಿ ತನ್ನ ಶಕ್ತಿಯನ್ನು ಕಳೆದುಕೊಂಡಿದೆಯೇನೋ ಎನ್ನುವ ಅನುಮಾನಗಳು ಬಂದಿದೆ. ಇದಲ್ಲದೇ ಗೃಹ ಇಲಾಖೆಗೆ 'ಗ್ರಹ'ವೇ ಹಿಡಿದಿದೆಯೇನೋ ಎನ್ನುವ ವಿಚಾರವನ್ನು.... ಏಕೆಂದರೆ ಈ ಹಿಂದೆ ಸದನದಲ್ಲಿ 1967-72ರಲ್ಲಿ ತಾವೆಲ್ಲಾ ಇದ್ದಿರಿ, ಆಗ ಎಂ.ಎಸ್.ಕೃಷ್ಣನ್‌ರವರು ಮತ್ತು ನಾವೆಲ್ಲಾ ಪೋಲಿಸ್ ಇಲಾಖೆ ಬಗ್ಗೆ ಚರ್ಚೆ ಮಾಡಿದ್ದೆವು. ಇಲಾಖೆಗೆ ಸಂಬಂಧಪಟ್ಟಂತೆ ಬೇಡಿಕೆ ಬಂದಾಗ ಅದರ ಬಗ್ಗೆ ನಾವು ಮಾತನಾಡುತ್ತೇವೆ. ಒಂದು ಮಾತನ್ನು ನಾನು ಈಗ ಏನು ಹೇಳುತ್ತೇನೆಂದರೆ, ಈಗಾಗಲೇ ಶ್ರೀ ಮಾನ್ ಸಿಂಧ್ಯಾರವರು ಏನು ಹೇಳಿದರೋ ಅದನ್ನು ಒಪ್ಪುವುದಾದರೆ ತಾವು ಗೃಹ ಮಂತ್ರಿಗಳಾದವರು ಎಲ್ಲಿ ಶಾಸನ ಸಭೆ ನಡೆಯುವಾಗ ಆಗಲೀ ಅಥವಾ ಅದಕ್ಕೆ ಮುಂದೆ ಈ ರೀತಿಯ ಕೊಲೆಗಳು ನಡೆದು, ದರೋಡೆ ನಡೆದು, ಅನ್ಯಾಯವಾಗಿರುವಾಗ ತಾವೇ ಸದನಕ್ಕೆ ಬಂದು ಹೇಳಿಕೆಯನ್ನು ಕೊಡಬೇಕು. ಇದರ ಬಗ್ಗೆ ನಾವು ಕೇಳಬೇಕಾದ ಅವಶ್ಯಕತೆ ಇಲ್ಲ, ಇವೊತ್ತು ಈ ರೀತಿಯ ಕೊಲೆಗಳು ನಡೆದಿವೆಯಾದ ಕಾರಣ ಇದಕ್ಕೆ ತಾವು ಏನು ಮಾಡುತ್ತೀರಿ ಎಂದು ನಾವು ಕೇಳಬೇಕಾಗಿಲ್ಲ, ತಾವು ಇದರ ಬಗ್ಗೆ ತಯಾರಾಗಿರಬೇಕು. ನಾವು ಅಧ್ಯಕ್ಷರ ಮೂಲಕ ತಮಗೆ ಪತ್ರ ಬರೆದು ಈವೊತ್ತು ಇಂಥ ಪ್ರಶ್ನೆ ಎತ್ತುತ್ತಿದ್ದಾರೆ ಎಂದು ಅಧ್ಯಕ್ಷರು ಏನು ಹೇಳುತ್ತಾರೆ, ಅದರ ಬಗ್ಗೆ ನಾವೇನೂ ಹೇಳಬೇಕಾಗಿಲ್ಲ. ತಾವೇ ಈ ಸದನದ ಮುಂದೆ, ಅಧ್ಯಕ್ಷರೇ ಸದನದಲ್ಲಿ ಈಗ ಒಂದು ಹೇಳಿಕೆಯನ್ನು ನೀಡಬೇಕಾಗಿದೆ, ಇವೊತ್ತು ಇಷ್ಟು ಕೊಲೆಯಾಗಿದೆ ಮತ್ತು ಪರಿಸ್ಥಿತಿ ರಾಜ್ಯದಲ್ಲಿ ಸಧ್ಯದಲ್ಲಿ ಈ ರೀತಿ ಇದೆ ಎಂಬ ಬಗ್ಗೆ ತಾವೇ ಹೇಳಬೇಕೇ ವಿನಃ ನಾವು ಇದರ ಬಗ್ಗೆ ಪ್ರಶ್ನೆ ಎತ್ತಿರತಕ್ಕದ್ದು ಅದು ನಮ್ಮ ಕರ್ತವ್ಯ, ಅದನ್ನು ನಾವೇ ಮಾಡಲೇಬೇಕಾಗಿದೆ. ಆದ್ದರಿಂದ ಸರ್ಕಾರ ಈ ನಿಟ್ಟಿನಲ್ಲಿ ಸಂಪೂರ್ಣ ವಿಫಲವಾಗಿದೆ ಎಂಬುದರಲ್ಲಿ ಬೇರೆ ಮಾತೇ ಇಲ್ಲ. ಆದ್ದರಿಂದ ಕಾನೂನನ್ನು ಬಲಾಢ್ಯರು, ದರೋಡೆಕೋರರು, ರೌಡಿಗಳು, ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬಾರದು. ಈಗ ಇದು ಗುರುತರವಾದಂಥ, ತೀವ್ರವಾದಂಥ ಅನ್ಯಾಯ ನಡೆದಿದೆ. ಈ ಬಗ್ಗೆ ಸಮಗ್ರ ತನಿಖೆ ಆಗಲೇಬೇಕಾಗಿದೆ. ಇದರ ಬಗ್ಗೆ ಸರ್ಕಾರ ಸ್ಪಷ್ಟವಾಗಿ ತಮ್ಮ ನೀತಿಯನ್ನು ಹೇಳಬೇಕು.

ಶ್ರೀ ವೈ.ರಾಮಕೃಷ್ಣ:-• ಮಾನ್ಯ ಉಪಾಧ್ಯಕ್ಷರೇ, ಇದರ ಬಗ್ಗೆ ಒಂದೇ ಒಂದು ನಿರ್ದಿಷ್ಟವಾದ ಪ್ರಕರಣವನ್ನು ತಮ್ಮ ಗಮನಕ್ಕೆ ತಂದಿದ್ದೇನೆ ಮತ್ತು ಆ ವಿಚಾರದ ಬಗ್ಗೆ ಮಾತ್ರ ನಾನು ಮಾತನಾಡಿದ್ದೇನೆ. ನನ್ನ ಹತ್ತಿರ ಇರುವ ಎಲ್ಲಾ ವಿಚಾರಗಳನ್ನು ಹೇಳಬೇಕಾದರೆ ಮೂರು ದಿವಸಗಳು ಬೇಕಾಗುತ್ತದೆ. ಆದ್ದರಿಂದ ನಿರ್ದಿಷ್ಟವಾದಂಥ ವಿಚಾರವನ್ನು ನಾನು ಈಗಾಗಲೇ ತಮ್ಮ ಗಮನಕ್ಕೆ ತಂದಿದ್ದೇನೆ. ಇವೊತ್ತು ಮರಣಕ್ಕೀಡಾದಂಥ ವ್ಯಕ್ತಿಗಳ ಪತ್ನಿಯರನ್ನು ನೋಡಿದರೆ ಬಹಳ ದುಃಖವಾಗುತ್ತದೆ, ನನಗಂತೂ ಕಣ್ಣೀರೇ ಬಂದುಬಿಟ್ಟಿತು. ಅಷ್ಟು ತಬ್ಬಲಿ ಮಕ್ಕಳು, ಮೂರು ಜನ ಹೆಣ್ಣು ಮಕ್ಕಳು, ಮತ್ತು ಈಗಾಗಲೇ ಅವರ ಮನೆಗಳನ್ನು ಒಡೆದು ಹಾಕಿದ್ದಾರೆ, ಇದಕ್ಕೆ ಏನು

ಪರಿಹಾರವನ್ನು ಸರ್ಕಾರ ಕೊಡಬೇಕು, ಈ ಸಂದರ್ಭದಲ್ಲಿ ಸರ್ಕಾರ ಅವರಿಗೆ ಏನು ಪರಿಹಾರವನ್ನು ಕೊಡಬಹುದು. ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಆ ಹೆಣ್ಣು ಮಕ್ಕಳಿಗೆ ದಯವಿಟ್ಟು ಜವಾನರ ಕೆಲಸವನ್ನಾದರೂ ಕೊಡಬೇಕು. ಏಕೆಂದರೆ ಆ ತಬ್ಬಲಿ ಮಕ್ಕಳನ್ನು ಸಾಕಬೇಕಾಗಿದೆಯಲ್ಲ ಮತ್ತು ಜೀವನವನ್ನು ಮಾಡಬೇಕಲ್ಲ. ಆದಕಾರಣ ಅವರಿಗೆ ಜವಾನನ ಕೆಲಸವನ್ನಾದರೂ ಕೊಡಿ, ಇದು ನನ್ನ ಮೊದಲನೇ ಬೇಡಿಕೆ. ಎರಡನೆಯದಾಗಿ ಒಂದೊಂದು ಲಕ್ಷ ರೂ.ಗಳ ಪರಿಹಾರವನ್ನಾದರೂ ಕೊಡಿ, ಈಗ ಒಬ್ಬರಿಗೆ 18 ವರ್ಷದ ಹೆಣ್ಣುಮಗಳಿದ್ದು ನಂತರದ 15 ವರ್ಷದ ಮತ್ತು 12 ವರ್ಷದ ಮಕ್ಕಳಿದ್ದಾರೆ. ನಾನು ಖುದ್ದಾಗಿ ನನ್ನ ಕಣ್ಣಾರೆ ನೋಡಿದ್ದೇನೆ. ಮೂರನೆಯದಾಗಿ ನಿಷ್ಪಕ್ಷಪಾತವಾಗಿ ಇದರ ಬಗ್ಗೆ ವಿಚಾರಣೆಯನ್ನು ಸರ್ಕಾರ ಮಾಡಬೇಕು. ಏಕೆಂದರೆ ಇದರಲ್ಲಿ ದೊಡ್ಡವರು ಭಾಗಿಗಳಾಗಿದ್ದಾರೆ ಅವರು ಒಂದು ಕಡೆ ಎಲ್ಲೋ ಒಳಗಿದ್ದಾರೆ. ಏಕೆಂದರೆ ಅವರ ಹೆಸರನ್ನು ಇಲ್ಲಿ ಹೇಳಿದರೆ ನಮ್ಮ ಮೇಲೆ ಬೀಳುತ್ತಾರೆ. ಆದ್ದರಿಂದ ನಾವೇನೂ ಹೇಳುವುದಕ್ಕೆ ಹೋಗುವುದಿಲ್ಲ. ಅದಕ್ಕೋಸ್ಕರ ಈಗ ನಾನು ಏನು ಹೇಳುತ್ತೇನೆಂದರೆ ಇದರ ಬಗ್ಗೆ ಜ್ಯುಡಿಶಿಯಲ್ ಎನ್‌ಕ್ವೈರಿಯನ್ನು ಮಾಡಿಸಿ, ಇಂಥ ಪ್ರಕರಣಗಳು ಇನ್ನು ಮುಂದೆ ನಡೆಯಬಾರದು. ರಾಜ್ಯದಲ್ಲಿ ಇರುವ ಎಲ್ಲಾ 175 ತಾಲ್ಲೂಕುಗಳಲ್ಲಿ ಇಂಥ ಪ್ರಕರಣಗಳು ನಡೆಯುತ್ತಿದೆ ಎಂದು ಹೇಳುವುದಕ್ಕೆ ಆಗುತ್ತದೆಯೇ? ಅಥವಾ 22 ಜಿಲ್ಲೆಗಳಲ್ಲಿಯೂ ನಡೆಯುತ್ತಿದೆ ಎಂದು ಹೇಳುವುದಕ್ಕಾಗುತ್ತದೆಯೇ? ಇಲ್ಲ, ಈ ರೀತಿ ಎಲ್ಲೂ ನಡೆಯುತ್ತಿಲ್ಲ. ಆದರೆ ಬೆಂಗಳೂರು ಜಿಲ್ಲೆಯಲ್ಲಿಯೇ ಈ ರೀತಿ ಏಕೆ ನಡೆಯುತ್ತಿದೆ? ಇಷ್ಟೊಂದು ಕೊಲೆಗಳು ಬೆಂಗಳೂರು ಜಿಲ್ಲೆಯಲ್ಲಿಯೇ ಏಕೆ ನಡೆಯುತ್ತಿದೆ? ಯಾರ ಪ್ರಭಾವ?

ಉಪಾಧ್ಯಕ್ಷರು:- ಈಗ ವೇಳೆ 30 ನಿಮಿಷ ಮಾತ್ರ ನಿಗದಿಪಡಿಸಿರುವುದರಿಂದ ಬೇಗ ಮುಗಿಸಿ. ಏಕೆಂದರೆ ಬೇರೆಯವರಿಗೂ 30 ನಿಮಿಷ ನಿಗದಿಪಡಿಸಿದ್ದೇವೆ.

ಶ್ರೀ ವೈ.ರಾಮಕೃಷ್ಣ:- ಬೇಗ ಮುಗಿಸುತ್ತೇನೆ. ಈಗ ಆರು ಮನೆಗಳು ಏನು ಒಡೆದು ಹೋಗಿವೆ ಆ ಆರು ಮನೆಗಳನ್ನು ಅವರು ಕಟ್ಟಿಕೊಳ್ಳುವುದಕ್ಕೆ ತಾವು ದಯವಿಟ್ಟು ಹೌಸಿಂಗ್ ಸ್ಕೀಮ್‌ನಲ್ಲಿ ಅವರಿಗೆ ಅಕಾಮಡೇಟ್ ಮಾಡಿ ಮತ್ತು ಮೂರು ಜನರು ಹೆಂಗಸರಿಗೆ ಏಟು ಬಿದ್ದಿದೆ, ಬೇರೆ ಪಕ್ಷದವರಿಗೆ ಯಾರಿಗೂ ಏಟು ಬಿದ್ದಿಲ್ಲವಾದರೂ ಏಟು ಬಿದ್ದಿರುವುದು ಬಿ.ಜೆ.ಪಿ.ಯವರಿಗೆ ಮಾತ್ರ. ದಯವಿಟ್ಟು ಅವರಿಗೆ ಮೆಡಿಕಲ್ ರಿಲೀಫ್ ಕೊಡುವುದರ ಜೊತೆಗೆ ಇದರ ಬಗ್ಗೆ ನಿಷ್ಪಕ್ಷಪಾತವಾಗಿ ಜ್ಯುಡಿಶಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ತಾವು ಆರ್ಡರ್ ಮಾಡಿದರೆ ಕನಿಷ್ಠ ನಮ್ಮನ್ನು ಕೇಳಿಕೊಳ್ಳುವವರಿದ್ದಾರೆ, ನಮಗೂ ನ್ಯಾಯ ದೊರೆಯುತ್ತದೆ ಎನ್ನತಕ್ಕಂಥ ಮನೋಭಾವ ನಮಗೂ ಬರಬೇಕಲ್ಲ, ನಮ್ಮ ಪಕ್ಷದವರಿಗೂ ಬರಬೇಕಲ್ಲ. ಸ್ವಾಮಿ, ನ್ಯಾಯವಾಗಿ ನೋಡಿದರೆ ಮೈನಾರಿಟೀಸ್‌ಗೆ ವಿಶೇಷ ರಕ್ಷಣೆಯನ್ನು ಕೊಡಬೇಕು. ಆದರೆ ಭಕ್ಷಣೆ ಮಾಡುತ್ತಿದ್ದಾರೆ, ಇದಕ್ಕೆ ನಾವು ಎಲ್ಲಿಗೆ ಹೋಗೋಣ. ಪೋಲಿಸಿನವರು ಮತ್ತು

ಅಧಿಕಾರಿಗಳು ಅವರ ಪಾರ್ಟಿಯವರಿಗೆ ರಕ್ಷಣೆ ಕೊಡುವಾಗ ನಾವೆಲ್ಲಿಗೆ ಹೋಗೋಣ? ಅದಕ್ಕೆ ನಾನು ಹೇಳಿದ್ದು ದಯವಿಟ್ಟು ಹ್ಯುಮನ್ ರೈಟ್ಸ್ ಕಮಿಶನ್‌ನ್ನು ಸೆಟಪ್ ಮಾಡಿ ಎಂದು ಹೇಳಿದ್ದು. ಆದರೆ ಇನ್ನೂ ಮಾಡುತ್ತಿಲ್ಲ. ಇವೊತ್ತು ನಮ್ಮ ಮಂತ್ರಿಗಳ ಮೇಲೆ ಪ್ರಿವಿಲೇಜ್ ಮೋಶನ್ ಸಿಂಧ್ಯಾರವರ ಮೇಲೆ ತರಬೇಕು. ಆವೊತ್ತು ಅವರು ಹೇಳಿದರು, ಇನ್ನು 15 ದಿವಸದಲ್ಲಿ ನಾನು ಹ್ಯುಮನ್ ರೈಟ್ಸ್ ಕಮಿಶನ್ ಮಾಡುತ್ತೇನೆ ಎಂದು ಹೇಳಿದ್ದರು. ದಯವಿಟ್ಟು ಪ್ರೊಸೀಡಿಂಗ್ಸ್ ತೆಗೆದು ನೋಡಿ. ಏಕೆ ಸ್ವಾಮಿ ಹ್ಯುಮನ್ ರೈಟ್ಸ್ ಕಮಿಶನ್ ಮಾಡಲಿಲ್ಲ? ಮಾಡದಿರುವುದಕ್ಕೆ ಕಾರಣಗಳೇನು? ಎಲ್ಲಾ ಕಡೆ ಆಗಿರುವಾಗ ಇಲ್ಲಿ ಏಕೆ ಮಾಡಲಿಲ್ಲ? ಇದನ್ನು ತಾವು ಛಾಲೆಂಜ್ ಎಂದು ತಿಳಿದುಕೊಂಡು ದಯವಿಟ್ಟು ಹ್ಯುಮನ್ ರೈಟ್ಸ್ ಕಮಿಶನ್ ಸೆಟಪ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು ನನಗೆ ಎರಡು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ತಮಗೆ ನನ್ನ ವಂದನೆಗಳು.

+ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೇ, ನಾನು ಅವರ ಊರಾದ ಅರಕೆರೆ ಗ್ರಾಮಕ್ಕೆ ಹೋಗಿದ್ದೆ. ಇಲ್ಲಿ ನಾನು ಪಕ್ಷಭೇದ ಮರೆತು ಮಾತನಾಡುತ್ತಿದ್ದೇನೆ. ಏಕೆಂದರೆ ಅಲ್ಲಿ ಸತ್ತವರೇನಿದ್ದಾರೆ, ಮತ್ತು ಗಲಾಟೆ ಮಾಡಿರಂಥವರು ಕೂಡ ಮೊದಲು ಕಾಂಗ್ರೆಸ್ಸಿನಲ್ಲಿದ್ದು, ಆಮೇಲೆ ಜನತಾಕ್ಕೆ ಹೋದ, ಆಮೇಲೆ ಬಿ.ಜೆ.ಪಿ.ಗೆ ಹೋದರು ಮತ್ತೆ ಈಗ ಜನತಾದಳಕ್ಕೆ ಬಂದಿದ್ದಾರೆ. ಏಕೆಂದರೆ ಅವರು ತಿರುಗುತ್ತಾ ಇರುತ್ತಾರೆ ಎಲ್ಲಾ ಪಾರ್ಟಿಯಲ್ಲೂ. ಏಕೆಂದರೆ ಅವರು ಹಳ್ಳಿಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಬೇಕೆನ್ನುವ ದೃಷ್ಟಿಯಿಂದ ಇಂಥ ಗಲಾಟೆಗಳು ಅಕ್ಕಪಕ್ಕದ ಹಳ್ಳಿಗಳಲ್ಲೂ ಕೂಡ ಅವರು ಮಾಡಿಸುತ್ತಿರುತ್ತಾರೆ. ಅಲ್ಲಿ ಪೋಲಿಸ್ ಅಧಿಕಾರಿಗಳು ಅವರಿಗೆ ಸಪೋರ್ಟ್ ಮಾಡುತ್ತಾ ಇದ್ದಾರೆ. ಅಲ್ಲಿ ಇರತಕ್ಕಂಥ ಎ.ಎಸ್.ಐ.ಮೇಲೆಯೇ ಈ ಹಿಂದೆ ಒಂದು ಕಂಪ್ಲೇಂಟ್ ಇತ್ತು, ಅದನ್ನು ಈಮೊದಲು ಮಾತನಾಡಿದವರು ಹೇಳಲಿಲ್ಲ, ಎ.ಎಸ್.ಐ. ಮೇಲೆ ಈ ಹಿಂದೆಯೇ ಕಂಪ್ಲೆಂಟ್ ಇತ್ತು. ಅವನಿಗೆ ಟ್ರಾನ್ಸ್‌ಫರ್ ಆಗಿದ್ದರೂ ಕೂಡ ಪುನಃ ಅವನನ್ನೇ ಅಲ್ಲಿಗೆ ಕರೆಸಿಕೊಂಡು ರಾಜನ-ಕುಂಟೆ ಪೋಲಿಸ್ ಸ್ಟೇಷನ್‌ಗೆ ಪುನಃ ಆತನನ್ನು ಹಾಕಿಸಿಕೊಂಡು ಈ ಗಲಾಟೆ ಮಾಡಿಸಿದ್ದುದು. ತಕ್ಷಣ ಆ ಎ.ಎಸ್.ಐ.ನ್ನು ಸಸ್ಪೆಂಡ್ ಮಾಡಬೇಕು. ಏಕೆಂದರೆ ಆತನನ್ನು ವರ್ಗ ಮಾಡಿದ ಮೇಲೆ ಪುನಃ ಕೆಲವು ಕಾರ್ಯಕರ್ತರು ಅವನೇ ಅಲ್ಲಿ ಇರಬೇಕೆಂದು ಆತನನ್ನು ಕರೆಸಿಕೊಂಡು ಅವನ ನೇತೃತ್ವದಲ್ಲಿಯೇ ಈ ಮರ್ಡರ್ ನಡೆದಿದ್ದು. ಅದಕ್ಕಾಗಿ ಅತನನ್ನು ತಕ್ಷಣ ಸಸ್ಪೆಂಡ್ ಮಾಡಿ ಮತ್ತು ಈಗ ಏನು ಈ ಪ್ರಕರಣದಿಂದ ಮನೆ ಕಳೆದುಕೊಂಡಿದ್ದಾರೆ, ಮಠ ಕಳೆದುಕೊಂಡಿದ್ದಾರೆ ಅವರುಗಳು ತುಂಬಾ ಬಡವರು ಆಗಿದ್ದು ಅವರವರಲ್ಲೇ ಜಗಳವಾಗಿದ್ದು ಅದಕ್ಕಾಗಿ ಅವರಿಗೆ ಮನೆಗಳ ವ್ಯವಸ್ಥೆಯನ್ನು 'ಆಶ್ರಯ' ಯೋಜನೆಯಲ್ಲಾಗಲೀ ಅಥವಾ 'ಇಂದಿರಾ ಅವಾಸ್' ಯೋಜನೆಯಲ್ಲಾದರೂ ಕಟ್ಟಿಸಿಕೊಡತಕ್ಕಂಥ ವ್ಯವಸ್ಥೆ ಮಾಡಬೇಕು. ಪೋಲಿಸ್ ಬಂದೋಬಸ್ತ್‌ನ್ನು ಅಲ್ಲಿ ಹಾಡಬೇಕು ಮತ್ತು ತಕ್ಷಣ ಆ ಎ.ಎಸ್.ಐ.ನನ್ನು ಸಸ್ಪೆಂಡ್

ಮಾಡಿ, ಈ ಪ್ರಕರಣವನ್ನು ವಿಚಾರಣೆ ಮಾಡಲು ನೀವು ಸಿ.ಓ.ಡಿ.ಗಾದರೂ ರೆಫರ್ ಮಾಡಿ, ಅಥವಾ ಈಗಾಗಲೇ ಮಾತನಾಡಿದ ರಾಮಕೃಷ್ಣರವರು ಹೇಳಿದಂತೆ ಜ್ಯುಡಿಶಿಯಲ್ ಎನ್‌ಕ್ವೈರಿಯಾದರೂ ಯಾವ ಮಟ್ಟದಲ್ಲಿ ಮಾಡುತ್ತೀರೋ ಮಾಡಿ. ಆದರೆ ನನ್ನ ಅಭಿಪ್ರಾಯವೇನೆಂದರೆ ಈ ಪ್ರಕರಣದಲ್ಲಿ ರಾಜಕೀಯಕ್ಕಿಂತಲೂ ಅಲ್ಲಿ ವೆಸ್ಟೆಡ್ ಇಂಟರೆಸ್ಟ್ ಕ್ಲಾಸ್‌ನವರು ಈ ಕೆಲಸವನ್ನು ಮಾಡುತ್ತಿದ್ದಾರೆ. ಆ ವೆಸ್ಟೆಡ್ ಇಂಟರೆಸ್ಟ್ ಕ್ಲಾಸ್‌ನವರು ಯಾರು? ಇದರಲ್ಲಿ ನಿಮ್ಮ ಪಾರ್ಟಿಯವರು ಇರಬಹುದು, ನಮ್ಮ ಪಾರ್ಟಿಯವರು ಇರಬಹುದು ಅಥವಾ ಅವರ ಪಾರ್ಟಿಯವರು ಇರಬಹುದು. ಇದನ್ನು ಕಂಡುಹಿಡಿಯಬೇಕಾದರೆ ಹೈಯರ್ ಆಫೀಸರ್ಸ್ ಐ.ಜಿ.ಪಿ. ಲೆವಲ್‌ನಲ್ಲಿ ಹೋಮ್ ಸೆಕ್ರೆಟರಿ ಇವರು ಯಾರಾದರೂ ಕೈ ಹಾಕಿ. ಏಕೆಂದರೆ ಬಹಳ ದೂರವಿಲ್ಲ ನೋಡಿ, ಮೇಖ್ರಿ ಸರ್ಕ್‌ಲ್‌ನಿಂದ ಕೇವಲ 14 ಕಿ.ಮೀ. ದೂರವಾಗುತ್ತದಷ್ಟೆ. ಅಂಥ ಕಡೆ ಮೂರು-ಮೂರು, ನಾಲ್ಕು-ನಾಲ್ಕು ಆದರೂ ರಾಜನಕುಂಟೆಯಂಥ ಊರು ಮುಖ್ಯರಸ್ತೆಯಲ್ಲಿದೆ, ಅದು ನ್ಯಾಶನಲ್ ಹೈವೆ, ಅಥವಾ ನಮ್ಮ ದೊಡ್ಡಬಳ್ಳಾಪುರಕ್ಕೆ ಹೋಗತಕ್ಕಂಥ ಕಡೆಯಿಂದ ಈ ಊರು ಕೇವಲ 6.ಕಿ.ಮಿ.ಗಳಾಗುತ್ತದೆ. ಇದರ ಬಗ್ಗೆ ಮಾಹಿತಿಗಳು ಇದ್ದರೂ ಕೂಡ 8 ಗಂಟೆಗಳು ಕಳೆದರೂ ಪೋಲಿಸ್‌ನವರು ಅಲ್ಲಿಗೆ ಹೋಗಿಲ್ಲ. ಅಂದರೆ ಕೊಲ್ಯುಶನ್ ದಿಂದಲೇ ಮಾಡಿದ್ದಾರೆ ಎನ್ನತಕ್ಕಂಥದ್ದು ಬಹಿರಂಗಪಡುತ್ತಿದೆ. ಅದಕ್ಕಾಗಿ ದಯವಿಟ್ಟು ಅದರ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು ಮತ್ತು ಈ ಬಗ್ಗೆ ಅನೇಕರು ಅನೇಕ ವಿಷಯಗಳನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ ಅದನ್ನು ಪುನಃ ನಾನೇನು ಹೇಳಬೇಕಾಗಿಲ್ಲ. ಸಂಬಂಧಪಟ್ಟವರಿಗೆ ಪರಿಹಾರವನ್ನು ಕೊಡುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕು.

(ಆ) ಬಸವಾರಜ್ ಶಿವಪ್ಪ ಗುಡ್ಡಟ್ಟಿ ಎಂಬೊತನ ಮೇಲೆ 16 ಜನರ ಗುಂಪಿನಿಂದ ದುಷ್ಕೃತ್ಯ.

+ ಶ್ರೀ ಮಂಜುನಾಥ್ ಸಿ.ಕುನ್ನೂರ್:- ಮಾನ್ಯ ಉಪಾಧ್ಯಕ್ಷರೆ,

ಉಪಾಧ್ಯಕ್ಷರು:- ಈಗ 30 ನಿಮಿಷ ನಿಗದಿಪಡಿಸಿರುವುದರಿಂದ ಇನ್ನೂ 5 ಜನರು ಮಾತನಾಡುವವರು ಇದ್ದಾರೆ.

ಶ್ರೀ ಮಂಜುನಾಥ್ ಸಿ.ಕುನ್ನೂರ್:- ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಮಾತನಾಡಲು ಈಗಾಗಲೇ 15ನೇ ತಾರೀಖೇ ನೋಟೀಸ್ ಕೊಟ್ಟಿದ್ದೇನೆ.

1.40 ಪಿ.ಎಂ

ಉಪಾಧ್ಯಕ್ಷರು:- ಈಗಾಗಲೇ ಮಾನ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ.

ಶ್ರೀ ಮಂಜುನಾಥ್ ಸಿ.ಕುನ್ನೂರು:- ಮಾನ್ಯ ಉಪಾಧ್ಯಕ್ಷರೆ, ದಿನಾಂಕ 25-6-96ನೇ ದಿವಸ ರಾತ್ರಿ ಸುಮಾರು 11 ಗಂಟೆಗೆ ಬಸವರಾಜ್ ಶಿವಪ್ಪ ಗುದ್ದಟ್ಟಿ ಎಂಬತಕ್ಕ 39ವರ್ಷದ ಯುವಕ ಹೊರಗೆ ಹೊರಟ ಸಂದರ್ಭದಲ್ಲಿ ಸುಮಾರು 16ಜನರ ಗುಂಪು